TIGHT BINDING BOOK

**TEXT PROBLEM WITHIN THE BOOK ONLY**

**TEXT FLY WITHIN THE BOOK ONLY**

UNIVERSAL
LIBRARY
OU_198324
UNIVERSAL
LIBRARY

K 894.8141 K.6723
N21H
OSMANIA UNIVERSITY LIBRARY

# Osmania University Library

No. K894.8141 N21H Accession No. K.6723

or

; book should be returned on or before the date last
d below.

# ಹಣತೆ

ಪು. [illegible] ನರಸಿಂಹಾಚಾರ್

ಬೆಲೆ ರೂ. 1-75

1965
APR 1961

ಮೊದಲನೆಯ ಮುದ್ರಣ ೧೯೩೩
ಎರಡನೆಯ ಮುದ್ರಣ ೧೯೫೮

ಶ್ರೀ ಹೇಮಾವತಿ ಮುದ್ರಣಾಲಯ, ಗೊರೂರು.

ಹಕ್ಕುಗಳನ್ನು ಕಾದಿರಿಸಿದೆ.

# ನಿವೇದನೆ

## ಆಚಾರ್ಯ ಯಂ. ಹಿರಿಯಣ್ಣನವರ ಚರಣತಲದಲ್ಲಿ

ಆರ ಚಿಜ್ಜ್ಯೋತಿಯ ಕಿಡಿಯೊಂದು ಒಗೆಯಿತು
ತೂರಲು ಹೊತ್ತಿತೊ ‘ ಹಣತೆ ’
ಆ ಗುರುದೇವನ ಪದದೆಡೆ ಇದನಿಟ್ಟು
ಆಗುವೆ ಧನ್ಯ ನಾನಿಂದು.

# ಮುನ್ನುಡಿ

ಶ್ರೀಮಾನ್ ಪುರೋಹಿತ ತಿ. ನರಸಿಂಹಾಚಾರ್ಯರು ತಮ್ಮ ಕವನಗಳ ಈ ಸಂಗ್ರಹಕ್ಕೆ ಒಂದು ಮುನ್ನುಡಿಯನ್ನು ಬರೆಯಬೇಕೆಂದು ನನ್ನನ್ನು ಕೇಳಿದಾರೆ. ಇಂಥ ಕವನಗಳಿಗೆ ಮುನ್ನುಡಿ ಬರೆಯುವುದಕ್ಕೆ ಯಾರಾದರೂ ಹೆಮ್ಮೆಪಡಬೇಕು. ನಾನು ಈ ಕೆಲಸವನ್ನು ಸಂತೋಷದಿಂದ ಮಾಡುತ್ತಿದ್ದೇನೆ.

ಇಷ್ಟರಾದವರಿಂದ ಮುನ್ನುಡಿಯೊಂದನ್ನು ಬರೆಯಿಸಿ ಪುಸ್ತಕಗಳ ಆರಂಭದಲ್ಲಿಡುವುದು ಈಗ ನಮ್ಮಲ್ಲಿ ಒಂದು ವಾಡಿಕೆಯಾಗಿದೆ. ಇದು ಈಚೆಗೆ ಒಂದು ಶಿಷ್ಟಾಚಾರವೇ ಆಗಿದೆಯೆನ್ನಬಹುದು. ಮುನ್ನುಡಿಗಳನ್ನು ಬರೆಯುವುದು ಬರೆಯಿಸುವುದರಲ್ಲಿ ಇಷ್ಟವುಳ್ಳವರು ಹಾಗಿರಲಿ; ಮುನ್ನುಡಿಯನ್ನು ಬರೆಯುವುದು ಏಕೆ ಎಂದು ತಿಳಿಯಲಿಲ್ಲವಲ್ಲ ಎನ್ನುವವರೂ, ಮುನ್ನುಡಿಯಲ್ಲಿ ಏನನ್ನು ಹೇಳಬೇಕೆಂದು ತೋರಲಿಲ್ಲವಲ್ಲ ಎನ್ನುವವರೂ, ಮುನ್ನುಡಿಗಳನ್ನು ಬರೆದಿರುವುದುಂಟು. ಮುನ್ನುಡಿಯೆಂದರೆ ಬೇಸರಗೊಂಡು ಅದನ್ನು ಮುಳ್ನುಡಿ ಎಂದು ಬೈದಿರುವರೊಬ್ಬರು ತಮ್ಮ ಗ್ರಂಥ ಒಂದಕ್ಕೆ ಹಿರಿಯರಾದ ಒಬ್ಬ ಗೃಧ್ರ'ರಿಂದ—ಇದು ಅವರೇ ಉಪಯೋಗಿಸಿರುವ ಮಾತು — ಮುಳ್ನುಡಿಯನ್ನು ಬರೆಯಿಸುತ್ತೇನೆಂದು ಪತ್ರಿಕೆಯಲ್ಲಿ ಪ್ರಕಟಿಸಿದರು. ಅಂತು ನಾವೆಲ್ಲ ಈಗ ಮುನ್ನುಡಿಗಳನ್ನು ಬರೆಯುವುದರಿಂದ ಏನೋ ಪ್ರಯೋಜನವಿದೆಯೆಂದು ತಿಳಿದಿದೇವೆ.

ಈ ಭಾವನೆ ಸರಿಯೆಂದೇ ನನ್ನ ಅಭಿಪ್ರಾಯ. ನಮ್ಮ ಸಾಹಿತ್ಯ ಈಗ ಈಗ ಹೊಸ ದಾರಿಗಳಲ್ಲಿ ಏನಿದೆಯೆಂದು ನೋಡುವುದಕ್ಕೆ ಹೊರಟಿದೆ. ನಮ್ಮ ಕೆಲಸಗಾರರಿಗೆ ನಮ್ಮ ಭಾಷೆಯಲ್ಲಿ ಮೇಲ್ಪಂಕ್ತಿಗಳು ಸಾಕಾದಷ್ಟು ಇಲ್ಲ. ಆದದ್ದರಿಂದ ಒಂದು ತುಂಡು ಒಂದು ತುಣುಕು ಹೊಸದಾದ ಯಾವ ಕೃತಿಯನ್ನು ಬರೆದವನಾದರೂ ಇದರಿಂದ ಜನ ಸುಖಪಡುವರೋ ಇಲ್ಲವೋ ಎಂದು ಸಂದೇಹದಲ್ಲಿರುತ್ತಾನೆ. ಇದರ ಮೇಲೆ ಓದುವವರಿಗೆ ಇಂಥ ಕೃತಿಗಳ

ವಿಷಯದಲ್ಲಿ ರುಚಿ ಹದಕ್ಕೆ ಬಂದಿಲ್ಲ. 'ಕೇಳು ಜನಮೇಜಯ ಧರಿತ್ರೀ' ಎಂಬ ಮಾತನ್ನು ಕೇಳಿದೊಡನೆ ಒಂದು ರೀತಿಯ ಕಾವ್ಯ ರಸಕ್ಕೆ ಅನುವಾಗುವ ಮನಸ್ಸು "ಬಾನ್ ತಿಳಿದಿತ್ತು ಬಿಳಿ ಮುಗಿಲೋಳಿ" ಎಂದು ಓದಿದರೆ ಇದೇನು ವಿಷಯವೋ, ಈತನೇನು ಕಲ್ಲನ್ನು ಕಡೆದು ವಿಗ್ರಹವನ್ನು ಮಾಡುತ್ತಾನೋ ಗಾಳಿಯನ್ನು ಹಿಡಿದು ಜೀವವನ್ನು ಅಲ್ಲುತ್ತಾನೋ, ಎನ್ನುವುದನ್ನು ತಿಳಿಯದೆ ಇರುತ್ತದೆ. ಎಲ್ಲ ಸಾಹಿತ್ಯದಲ್ಲಿಯೂ ಈ ತೊಂದರೆ ಇದ್ದೇ ಇದೆ. ಇದರಿಂದಲೇ ಪೂರ್ವ ಗ್ರಂಥಗಳಿಗೆ ಕೂಡ ಒಂದು ವ್ಯಾಖ್ಯಾನ ಬೇಕಾಗಿರುವುದು. ಅನೇಕ ವೇಳೆ ಇಂಗ್ಲೀಷಿನಲ್ಲಿ ಹಿರಿಯ ಕವಿಗಳ ಕವನ ಸಂಗ್ರಹಗಳಿಗೆ ಅಭಿಮಾನಿ ವಿಮರ್ಶಕರು ಕವಿ ವಿಷಯವಾದ ವಿಮರ್ಶೆಯನ್ನು ಸೇರಿಸುತ್ತಾರೆ. ನಮ್ಮವರು ಬಹು ಸಮಯ ಪದ್ಯ ಓದುವ ಮೊದಲು ನಾಲ್ಕು ಮಾತನ್ನು ಪೀಠಿಕೆಯಾಗಿ ಹೇಳುತ್ತಾರೆ. ಕವಿಯಾದವನು ತನ್ನ ಕಾವ್ಯವನ್ನು ತಾನೇ ವಿವರಿಸುವುದು ತಪ್ಪಲ್ಲವೆಂದು ನಾವು ತಿಳಿದಿದ್ದರೆ ಕವಿಯೇ ಇಂಥ ಮುನ್ನುಡಿಯನ್ನು ಬರೆದು ಸೇರಿಸಬಹುದು. ಆದರೆ ಅನೇಕ ವೇಳೆ ಕವಿಗೆ ಜನದ ಮುಂದೆ ಬಂದು ನಿಲ್ಲುವಾಗ ತನಗೆ ಬೇಕಾದವರ ಕೈಯನ್ನು ಹಿಡಿದು ಬರುವುದು ಸುಖವೆಂದು ಕಾಣುತ್ತದೆ. ಕೃಷ್ಣನನ್ನು ನೋಡಹೋದ ರಾಧೆ ಜೊತೆಗೆ ಸಖಿಯನ್ನು ಕರೆದೊಯ್ದಳು. ಆ ಸಖಿ ವಯಸ್ಸಿನಲ್ಲಿ ರಾಧೆಗಿಂತ ಸ್ವಲ್ಪ ಹಿರಿಯಳೆಂದು ನನ್ನ ಊಹೆ. ನನ್ನ ಹೊಸ ಕವಿತೆಯ ಸಂಕೋಚವನ್ನು ನಿವಾರಿಸುವುದಕ್ಕೆ ನನ್ನಂಥವನ ಮುನ್ನುಡಿ ಎಂಬ ಇಂಥ ನೆಪ ಒಂದು ಪದ್ಯದಲ್ಲಿ ಆವಶ್ಯಕವಾಗಿದೆ.

ಇದರ ಮೇಲೆ ನಮ್ಮದೊಂದು ದೊಡ್ಡ ಆಸೆ. ಸಾಹಿತ್ಯ ಸೇವಕರಲ್ಲಿ ಪರಸ್ಪರ ಮತ್ಸರವಿರುತ್ತದೆ ಎಂದು ಸಾಮಾನ್ಯವಾದ ನಂಬಿಕೆ. ಬೆಳೆದ ಸಾಹಿತ್ಯಗಳಲ್ಲಿ ಇದರಿಂದ ತೊಂದರೆ ಕಾಣುವುದಿಲ್ಲ. ಸಾವಿರ ಜನ ಬರೆಯುವಲ್ಲಿ ಹತ್ತು ಗುಂಪಾದರೆ ಗುಂಪು ಒಂದಕ್ಕೆ ನೂರು ಜನ ಇರುತ್ತಾರೆ. ಹೊಸದಾಗಿ ತಲೆಯೆತ್ತುತ್ತಿರುವ ಸಾಹಿತ್ಯದಲ್ಲಿ ಉಪಾಸಕರು ಒಬ್ಬರಿಗೆ ಒಬ್ಬರು ನೆರವಾಗಿರಬೇಕು. ಹೀಗಿಲ್ಲದಿದ್ದರೆ ಸಂಪ್ರದಾಯ ಬೆಳೆಯದೆಯೇ ಹೋಗಬಹುದು. ನಮ್ಮ ಈಗಣ ಸ್ಥಿತಿಯಲ್ಲಿ ಕನ್ನಡದ ಸೇವಕರೆಲ್ಲ ಒಂದು ಮನೆಯ

ವರಂತಿರಬೇಕು; ನಾವೆಲ್ಲ ಒಂದು ಎಂಬ ಭಾವನೆಯಿಂದ ಬೆಳೆಯಬೇಕು, ಈ ಭಾವನೆ ಮೂಡುವುದಕ್ಕೆ ಮುನ್ನುಡಿಯನ್ನು ಬರೆಯುವುದೂ ಬರೆಯಿಸುವುದೂ ಒಂದು ದಾರಿ. ಇದರಿಂದ ಲೇಖಕರಲ್ಲಿ ನಾವು ಗೆಳೆಯರು ಎಂಬ ಭಾವನೆ ಮುಂದುವರಿಯುವುದು. ಇದೊಂದು ಸ್ನೇಹದ ಕಟ್ಟು, ಪ್ರೇಮದ ಅನುಬಂಧನ. ಉಳಿದ ಕಡೆ ಹೇಗಾದರೂ ಇರಲಿ ನಮ್ಮಲ್ಲಿ ಮತ್ಸರವಿಲ್ಲ; ಅಥವಾ ಇಲ್ಲಿ ಅಲ್ಲಿ ಇರುವುದಾದರೂ ಸಾಧ್ಯವಾದಷ್ಟು ಅದನ್ನು ತುಳಿದಿದೇವೆ; ನಮ್ಮ ತಾಯ ಮುಂದೆ ನಾವು ಜಗಳವಾಡುವುದಿಲ್ಲ—ಎಂಬುದನ್ನು ಕನ್ನಡದ ಸೇವಕರು ಬಾಯಲ್ಲಿ ಹೇಳಬೇಕು, ಮನಸ್ಸಿನಲ್ಲಿ ನೆನೆಯಬೇಕು, ಕಾರ್ಯದಲ್ಲಿ ತೋರಿಸಬೇಕು. ಮುನ್ನುಡಿಕಾರನು ಸ್ನೇಹವನ್ನು ಸೂಚಿಸುವಲ್ಲಿ ಹೊಗಳಿ ಹೇಳುವ ಮಾತು ಒಂದು ಹೆಚ್ಚಾದರೇನು? ಅವನು ಶಿಷ್ಟವಿಮರ್ಶಕನಲ್ಲ; ಅವನು ಹೊಗಳಿದ ಮಾತ್ರಕ್ಕೆ ಯಾರಿಗೂ ಧ್ರುವಪಟ್ಟ ಬರುವುದಿಲ್ಲ. ಆದರೆ ಜೊತೆಯವರಿಗೆ ನೆರವಾಗುವ ಮತ್ತು ಒಳ್ಳೆಯ ಮಾತನಾಡುವ ಸಂಪ್ರದಾಯ ಒಳ್ಳೆಯದು; ಅದನ್ನು ನಾವು ಬೆಳೆಸಬೇಕು. ನಮ್ಮ ಕವಿತೆ ಮುಂದಣ ಕಾಲಕ್ಕೆ ಜನಕ್ಕೆ ಬೇಕಾಗುವುದೋ ಇಲ್ಲವೋ; ಅದು ಹೇಗಾದರೂ, ಆಗ್ಗೆ ಕಾವ್ಯ ಚರಿತ್ರೆಯನ್ನು ಬರೆಯುವವನು, ಈ ಕವಿಗಳಲ್ಲಿ ಪರಸ್ಪರ ವೈಷಮ್ಯವಿರಲಿಲ್ಲ, ಬಹಳ ಪ್ರೇಮವೇ ಇತ್ತೆಂದು ತೋರುತ್ತದೆ, ಎಂದು ಹೇಳುವಂತೆ ನಾವು ಈಗ ನಡೆದುಕೊಳ್ಳಬೇಕು.

ಈ ಎಲ್ಲ ದೃಷ್ಟಿಯಿಂದಲೂ ಗ್ರಂಥಕರ್ತರಿಗೆ ಸೌಹಾರ್ದ ಆವಶ್ಯಕ. ತನ್ನಲ್ಲಿ ತನಗೆ ಖಂಡಿತವಾದ ನಂಬಿಕೆಯಿಲ್ಲವೆಂದ ಹಿರಿಯ ಕವಿ ಬರಿಯ ವಿನಯದ ನುಡಿಯನ್ನು ನುಡಿಯಲಿಲ್ಲ. ಕವಿಯಾದವನ ಮನಸ್ಸಿನಲ್ಲಿ ತಾನು ಕವಿ ಎಂಬ ತಿಳಿವಿನೊಂದಿಗೆ ಈ ಅಪ್ರತ್ಯಯವೂ ಅವಳಿಜವಳಿಯಾಗಿ ಬೆಳೆಯುತ್ತದೆ. ಅವನ ಕವಿತೆಯನ್ನು ಮೆಚ್ಚದವರು ಆ ಅವಳಿಯನ್ನು ನೋಡುತ್ತಾರೆ. ಮೆಚ್ಚುವವರಿಗೆ ಕಾಣುವುದು ಈ ಜವಳಿ. ಇಪ್ಪತ್ತು ವರ್ಷದ ಹಿಂದೆ ಕನ್ನಡದ ಕೆಲಸಗಾರರು ಹೊರಗೆ ಬರುವುದಕ್ಕೆ ಹಿಂತೆಗೆಯುತ್ತಿದ್ದರು. ಧೈರ್ಯ ಹೇಳುವ ಅಣ್ಣತಮ್ಮಂದಿರನ್ನು ಅವರು ಆಗ ಕಾಣಲಿಲ್ಲ. ಅಣ್ಣತಮ್ಮಂದಿರಿರಲಿಲ್ಲವೆಂದಲ್ಲ; ಒಬ್ಬರನ್ನೊಬ್ಬರು ಅವರು ಕಾಣಲಿಲ್ಲ. ಇದರಿಂದ ನಮ್ಮ ಸಾಹಿತ್ಯದ

ಮುನ್ನುಡಿಯಲ್ಲಿ ಹತ್ತಾರು ವರ್ಷವನ್ನು ವೃಥಾ ಕಳೆದು ಕೊಂಡೆವು. ಇನ್ನು, ತನಗೆ ಮೊದಲು ಸಾಹಿತ್ಯದಲ್ಲಿ ಕೆಲಸ ಮಾಡಿರುವವರ ಮೆಚ್ಚಿಕೆಯ ಮಾತು ಗ್ರಂಥಕರ್ತನಿಗೆ ಎಷ್ಟು ಸಂತೋಷವನ್ನು ಕೊಡುತ್ತದೆನ್ನುವುದು ಬಹು ಜನರ ಅನುಭವದಲ್ಲಿ ಇರುವ ವಿಷಯ. ಈ ಮುನ್ನುಡಿಯನ್ನು ಬರೆಯುವ ನಾನು ಬಹಳ ಸಂಕೋಚಪಡುವವನಲ್ಲ. ಆದರೂ ನಾನು ನನ್ನ ಕೆಲಸದಲ್ಲಿ ಮುಂದೆ ನಡೆಯಬೇಕಾದರೆ ನನಗೆ ಹಿರಿಯರ ಧೈರ್ಯದ ಮಾತು, ಕಿರಿಯರ ಪ್ರೇಮದ ಮಾತು ಬೇಕಾದುವು. ಸಂಕೋಚಪಡದೆ ಇರುವವರಿಗೂ ಇಂಥ ನೆರವು ಬೇಕಾಗುತ್ತದೆ. ಇನ್ನು ಸಂಕೋಚಪಡುವ ಲೇಖಕರ ಮಾತೇನು ?

ಶ್ರೀಮಾನ್ ನರಸಿಂಹಾಚಾರ್ಯರು ಬಹಳ ಸಂಕೋಚ ಸ್ವಭಾವದ ಕವಿಗಳು. ಜನ ಇವರನ್ನು ಹೊರಕ್ಕೆ ಕರೆಯದೆ ಇದ್ದರೆ ಇವರ ಲೇಖನ, ಇವರ ಸ್ನೇಹಿತರಲ್ಲಿ ಸುತ್ತುತ್ತ ಇದ್ದುಬಿಡುವುದು. ಆ ಸ್ನೇಹಿತರು ಅದನ್ನು ಸ್ವಲ್ಪ ಅವಜ್ಞತೆಯಿಂದ ನೋಡಿದರೆ ಅದು ಇವರ ಹಸ್ತಪ್ರತಿಯಲ್ಲೇ ನಿಂತು ಹೋಗುವುದು. ಇವರ ಸ್ವಭಾವ ಹೀಗಿರುವಲ್ಲಿ ಇವರ ಕಾವ್ಯವೋ ಹೊಸ ಸಾಹಿತ್ಯದ ಅತ್ಯುತ್ತಮ ಕೃತಿಯಲ್ಲಿ ಸೇರತಕ್ಕದ್ದಾಗಿದೆ. ಕನ್ನಡದ ಆಧುನಿಕ ಕವಿತೆಯ ಕುಲಪತಿಗಳಾದ ಶ್ರೀಮಾನ್ ಬೆಳ್ಳೂರ ವೈ. ಶ್ರೀಕಂಠಯ್ಯನವರ ಶಿಷ್ಯರು ಅವರಿಗೆ ಅರ್ಪಿಸಿದ 'ಕಿರಿಯ ಕಾಣಿಕೆ'ಯಲ್ಲಿ ಇವರ ಕವಿತೆ ಮೊದಲು ನನ್ನ ಕಣ್ಣಿಗೆ ಕಂಡಿತು. ಆಮೇಲೆ ಒಂದೆರಡು ಪದ್ಯ 'ತಳಿರಿ'ನಲ್ಲಿ ಬಂದವು. ಆ ಕವಿತೆಗಳನ್ನು ನೋಡಿದವರಿಗೆ ಇವರ ಕೃತಿಯಲ್ಲಿ ಹಿರಿದಾದ ಒಂದು ಕಾವ್ಯ ಶಕ್ತಿ ಇದೆ ಎಂಬ ಸೂಚನೆ ಸ್ಪಷ್ಟವಾಗಿ ಕಂಡಿತು. ಮುದುಕಿಯೊಬ್ಬಳು ಮಲೆಯ ಮೇಲಿನ ದೇಗುಲದಲ್ಲಿ ಪೂಜಾಮೂರ್ತಿಯ ಮುಂದೆ ರಂಗವಲ್ಲಿಯನ್ನು ಹಾಕುತ್ತಿರುವುದನ್ನು ನೋಡಿದ್ದನ್ನು ಹೇಳಿ ಇವರು ದೇವರು ಇದ್ದಾನೋ ಇಲ್ಲವೋ, ಭಕ್ತಿಯಿರುವುದು ನಿಜ ಎನ್ನುತ್ತಾರೆ. ಒಂದು ನಾಯಿ ಮರಿಯನ್ನು ಸಾಯಬಿಡಲಾರದೆ ಸಾಕಿದವರು ಅದು ಅಶುಚಿ ಎಂಬ ಕಾರಣದಿಂದ ಅದನ್ನು ಮುಟ್ಟದೆ ಇರುತ್ತಾರೆ. ಮಡಿ ಎಂಬ ಭಾವದಿಂದ ಕೆಡದ ಒಬ್ಬನು ಅದನ್ನು ಹತ್ತಿರಕ್ಕೆ ಕರೆದುಕೊಳ್ಳುತ್ತಾನೆ. ನಾಯಿ ಅವರನ್ನು ಬಿಡುತ್ತದೆ, ಇವನಿಗೆ

ದತ್ತಾಗುತ್ತದೆ. ಕವಿ ಇದನ್ನು ಹೇಳಿ ಕರುಣೆ ದೊಡ್ಡದೇ ಸರಿ ಆದರೆ ಒಲುಮೆಗೆ ಸಮನಲ್ಲ ಎನ್ನುತ್ತಾರೆ. ತೀರಿಹೋದ ಒಬ್ಬ ಸೋದರಿಯನ್ನು ಕುರಿತು ಮನದ ನೋವನ್ನು ಹೊಳೆ ಹರಿಸುವುದು ಇನ್ನೊಂದು ಕವಿತೆ. ಇಲ್ಲೆಲ್ಲ ಒಂದೊಂದು ಭಾವ ನಯವಾಗಿ ಹೊರಬಿದ್ದು ಒಂದು ನಕ್ಷತ್ರದಂತೆ ನಿಂತು ಮಿನುಗುತ್ತದೆ. ಇವರು ಪ್ರಕೃತಿಯ ಸೊಬಗನ್ನು ವಿವರವಾಗಿ ನೋಡಿ ವಿವರವಾಗಿ ನೆನೆಯುತ್ತಾರೆ, ಜೀವನದಲ್ಲಿ ಬಹು ವಿಧದ ಜನವನ್ನು ಬಹು ರೀತಿಯ ಸನ್ನಿವೇಶವನ್ನು ನೋಡಿದಾರೆ. ನಯವಾದ ಭಾವಕ್ಕೆ ತಕ್ಕಂತೆ ಇವರ ಉಕ್ತಿ ನಯವಾಗಿದೆ. ತೀರಿಹೋದ ಸೋದರಿ ಹೊಳೆಯಲ್ಲಿ ಜೊತೆಯವರೊಂದಿಗೆ ಸ್ನಾನಮಾಡ ಹೋಗಿ ಮುಳುಗಿಹೋದಳು. ಆಕೆಯ ಮತ್ತು ಆವಳ ಗೆಳತಿಯರ ಆ ದಿನದ ಸರಸವನ್ನು ಕವಿ 'ಹೊನಲೊಳಡಗಿದ ಜವನ ಮೊಗದಲಿ ನಗೆಯ ಹರಡುವ ಸರಸ' ಎಂದಿದಾರೆ. ಅಲ್ಲಲ್ಲಿ ಬರುವ ಉಪಮೆಗಳ ಸೊಗಸೂ ಹೀಗೆಯೇ. ಇದು ಕೆಲವು ವೇಳೆ ಕಾಣದೆಯೇ ಹೋಗಬಹುದು. ಈ ಸಂಗ್ರಹದಲ್ಲಿರುವ ಒಂದು ಕವಿತೆಯಲ್ಲಿ ದೇಗುಲದ ಮೌನವನ್ನು ಕುರಿತ ಮಾತಿನಲ್ಲಿ ಜೀವ ಈ ಜನ್ಮದಲ್ಲಿ ಬಸಿದು ತಿಳಿಯಿತೇ ಎಂದು ಒಂದು ಪ್ರಶ್ನೆಯಿದೆ. ನಮ್ಮ ಆತ್ಮದ ರಸ ನಿರ್ಮಲವಾಗಿ ದೇವರಿಗೆ ಅನುಭವ ಯೋಗ್ಯವಾಗಬೇಕು. ಅದರಲ್ಲಿ ಸೇರಿರುವ ಕಶ್ಮಲ ಹೋಗುವುದಕ್ಕಾಗಿ ಅದು ಜನ್ಮಗಳಲ್ಲಿ ಸೋಕ್ಕಿ ಇಳಿಯುತ್ತಿದೆ. ಈ ಬಾಳು ಒಂದು ಶೋಧಿಸುವ ವಸ್ತ್ರದಂತೆ. ಎಷ್ಟೋ ಭಾವ ಇಲ್ಲಿ ಒಂದು ಮಾತಿನಲ್ಲಿ ಅಡಗಿದೆ. ಇಂಥ ಭಾವ, ಇಂಥ ಮಾತು ಇವರ ಕೃತಿಗಳಲ್ಲಿ ಕಾಣುತ್ತಲೇ ಇರುತ್ತವೆ. ಶ್ರೀಮಾನ್ ನರಸಿಂಹಾಚಾರ್ಯರ ಕಾವ್ಯದೃಷ್ಟಿ ಮೊನೆಯಾದದ್ದು ನೆಲೆಯರಿತದ್ದು. ಇವರ ಜೀವನಾನುಭವ ಕೂರಾದದ್ದು ತೀವ್ರವಾದದ್ದು: ಇವರ ಮಾತು ಮುದ್ದಾದದ್ದು ಬಲವುಳ್ಳದ್ದು. ಈ ಕಾರಣದಿಂದೆಲ್ಲ ಇವರ ಕವಿತೆ ಅತ್ಯುತ್ತಮ ರೀತಿಯದು. ಇವರ ಮನೆತನ ಸಂಸ್ಕೃತದ ಅಭ್ಯಾಸದಲ್ಲಿ ಪಳಗಿದ್ದು ಎಂದು ಕೇಳಿದ್ದೇನೆ. ಇವರು ಇಂಗ್ಲೀಷಿನಲ್ಲಿ ಸಾಕಾದಷ್ಟು ಪಾಠಮಾಡಿದಾರೆ, ಕಾವ್ಯ ಓದಿದಾರೆ. ಇಲ್ಲಿ ಸೇರಿರುವ ಕವಿತೆ ಈ ಎರಡು ಸಂಸ್ಕಾರಗಳೂ ಸಮನ್ವಯವಾಗಿ ಬಂದ ಫಲ. ಇಲ್ಲಿ ಕಾಣುವುದು ಕಾಳಿದಾಸ ವರ್ಡ್ಸ್‌ವರ್ತ್ ಕವಿಗಳು ಜೊತೆ

ಯಾಗಿ ತಿದ್ದಿದ ಕವಿಮನೋಧರ್ಮ. ಕನ್ನಡದ ಕವಿತೆ ಈ ಹತ್ತು ವರ್ಷದಲ್ಲಿ ಹಲವು ಮುಖದಲ್ಲಿ ಹಲವು ರೀತಿಯ ಸೊಗಸನ್ನು ತೋರಿದೆ. ಆ ಸೊಗಸುಗಳಲ್ಲಿ ಈ ಕವಿತೆಗಳ ಸೊಗಸು ಒಂದು. ಇಲ್ಲಿ ನಮ್ಮ ನಾಡು ನುಡಿಯುತ್ತಿದೆ; ನಮ್ಮ ಸಂಸ್ಕೃತಿ ರೂಪವನ್ನು ಪಡೆಯುತ್ತಿದೆ; ನಮಗೆ ಇಂಥ ಕವಿತೆ ಬಹಳ ಬೇಕಾಗಿದೆ.

ಈ ಕವಿತೆಯನ್ನು ರಚಿಸಿರುವುದಕ್ಕಾಗಿ ನಾನು ಶ್ರೀಮಾನ್ ನರಸಿಂಹಾಚಾರ್ಯರನ್ನು ಅಭಿನಂದಿಸುತ್ತೇನೆ. ಇವರು ಇಂಥ ಕೆಲಸವನ್ನು ಇನ್ನೂ ಹೆಚ್ಚಾಗಿ ಮಾಡುವಂತೆ ನಮ್ಮಲ್ಲಿ ಹಿರಿಯರಾದವರು ಇವರಿಗೆ ಪ್ರೋತ್ಸಾಹ ಕೊಡುವರೆಂದು ನನಗೆ ನಂಬಿಕೆಯಿದೆ. ನಮ್ಮ ಸಾಹಿತ್ಯದ ಅತ್ಯುತ್ತಮ ಕೃತಿ ಇನ್ನೂ ಕೆಲವನ್ನು ಪ್ರಕಟಿಸುವುದಕ್ಕೆ ನೆರವಾದ ಪೂಜ್ಯ ಮಿತ್ರರ ನೆರವಿನಿಂದಲೇ ಈ ಕೃತಿಯು ಹೊರಕ್ಕೆ ಬರುತ್ತಿದೆ. ನಮ್ಮ ಜನರೂ ಕೂಡ ಹೊಸ ರೀತಿಯ ಕವಿತೆಯನ್ನು ಈಗಾಗಲೇ ತಕ್ಕಮಟ್ಟಿಗೆ ಒಪ್ಪಿಕೊಂಡಿದಾರೆ. ಅವರು ಈ ಕವಿತೆಯನ್ನೂ ಒಪ್ಪಿಕೊಳ್ಳುವುದರಲ್ಲಿ ಸಂದೇಹವಿಲ್ಲ. ಶ್ರೀಮಾನ್ ನರಸಿಂಹಾಚಾರ್ಯರ ಕೃತಿಗಳು ಜನದ ಮೆಚ್ಚಿಗೆಯನ್ನು ಪಡೆದು ದೇಶದಲ್ಲಿ ಕಾವ್ಯಾಭಿರುಚಿಯನ್ನು ಬೆಳೆಸಲೆಂದೂ, ಈ ಕವಿಯು ಇನ್ನೂ ಅನೇಕ ಕೃತಿಗಳನ್ನು ರಚಿಸಿ ತಾಯಿನುಡಿಯ ಸೇವೆಯಿಂದ ತಾವು ಕೀರ್ತಿ ಪಡೆದು ನಮಗೆ ಆನಂದವನ್ನು ಕೊಡಲೆಂದೂ ನಾನು ಹಾರೈಸುತ್ತೇನೆ.

ಬೆಂಗಳೂರು, ಶ್ರೀಮುಖ ಸಂ॥
ಕಾರ್ತೀಕ ಶುದ್ಧ ಪಾಡ್ಯಮಿ.

ಶ್ರೀನಿವಾಸ.

# ಅರಿಕೆ

ಅಲ್ಪಾತ್ಮನದಾದರೂ ನನ್ನ ಸತ್ವಸಾರವಾಗಿರುವುದರಿಂದ ಈ 'ಹಣತೆ' ಯು ಜನತಾ ಜನಾರ್ದನನ ಪೂಜಾದ್ರವ್ಯವಾಗುವುದಕ್ಕೆ ಯೋಗ್ಯವಾಗಿದೆ ಎಂದು ನಂಬಿ ಕನ್ನಡ ವಾಙ್ಮಯ ಪುಣ್ಯವಾಹಿನಿಯಲ್ಲಿ ಇದನ್ನು ಇಂದು ಗುರು ನಿವೇದನ ಪುರಸ್ಸರವಾಗಿ ತೇಲಿಬಿಟ್ಟದ್ದೇನೆ. ಈ ಪೂಜೆಯಿಂದ ಆ ಜನಾರ್ದನನು ಪ್ರೀತನಾಗಬಹುದು: ಆಗದಿರಬಹುದು, ಹೇಗಿದ್ದರೂ ಪೂಜೆ ಸಲಿಸಿದ ಮಾತ್ರದಿಂದಲೇ ನಾನು ಧನ್ಯ. ಹೀಗೆಂದು ನನ್ನ ನಂಬಿಕೆ.

ಇಂದು ಹೀಗೆ ನನ್ನ ಪೂಜೆಯನ್ನು ಸಲ್ಲಿಸುವ ಸುಯೋಗವನ್ನು ನನಗೆ ಕಲ್ಪಿಸಿಕೊಟ್ಟ ಪುಣ್ಯವು, ಈ ಕವನಗಳು ಹುಟ್ಟಿದ ಕ್ಷಣವೇ ತಮ್ಮ ಮಡಲಿನಲ್ಲಿ ಹಾಕಿಕೊಂಡು ಸಲಹಿ, ಸಿಂಗರಿಸಿ, ಜತೆಗೂಡಿಸಿ, ಹೊರಗೆ ತೋರಿ, ಹಿರಿಯರ ಮತ್ತು ವಿದ್ವಾಂಸರ, ಮುಖ್ಯವಾಗಿ ಶ್ರೀಮಾನ್ ಬಿ. ಎಂ. ಶ್ರೀಕಂಠಯ್ಯನವರ ಮತ್ತು ಶ್ರೀಮಾನ್ ಟಿ. ಎಸ್. ವೆಂಕಣ್ಣಯ್ಯನವರ, ಮೆಚ್ಚುಗೆಯನ್ನೂ ಆಶೀರ್ವಾದವನ್ನೂ ಸಂಪಾದಿಸಿಕೊಟ್ಟ, ಇವುಗಳಿಗೆ ಸಾಕುತಾಯಿಯಾದ, ಸನ್ಮಿತ್ರ ಶ್ರೀಮಾನ್ ತಿ ನಂ. ಶ್ರೀಕಂಠಯ್ಯನವರಿಗೆ ಸೇರಿದುದು; ಮತ್ತು ನನ್ನಲ್ಲೂ ನನ್ನ ಕೃತಿಗಳಲ್ಲೂ ವಿಶೇಷವಾದ ಕೃಪೆಯನ್ನೂ ಪ್ರೇಮವನ್ನೂ ತೋರಿಸಿ ನನ್ನ ಬಾಳಿಗೊಂದು ಬೆಲೆಕೊಟ್ಟಿರುವ ನನಗೆ ಗುರುಸ್ಥಾನೀಯರಾಗಿ ಪೂಜ್ಯರಾದ ಶ್ರೀಮಾನ್ ಮಾಸ್ತಿ ವೆಂಕಟೇಶ ಐಯ್ಯಂಗಾರ್ಯರಿಗೆ ಸೇರಿದುದು. ಈ ಉಪಕಾರವನ್ನೂ ನನ್ನ ಕೃತಜ್ಞತಾಭಾವವನ್ನೂ ನುಡಿಯಿಂದ ಅಳೆಯಲೆತ್ನಿಸಲು ನನಗೆ ಅಂಜಿಕೆಯಾಗುತ್ತದೆ, ನಾಚಿಕೆಯಾಗುತ್ತದೆ.

ಈ ಪುಸ್ತಕದಲ್ಲಿನ ಆರೇಳು ಕವನಗಳು ಈಗಾಗಲೇ ಮೈಸೂರು ಕರ್ನಾಟಕ ಸಂಘದವರು ಪ್ರಕಟಿಸಿರುವ 'ತಳಿರು' ಎಂಬ ಕವನ ಸಂಗ್ರಹದಲ್ಲಿಯೂ, ಮತ್ತು 'ಪ್ರಬುದ್ಧ ಕರ್ನಾಟಕ', 'ಜಯಕರ್ನಾಟಕ' ಮತ್ತು 'ಮಕ್ಕಳ ಪುಸ್ತಕ' ಪತ್ರಿಕೆಗಳಲ್ಲೂ ಅಚ್ಚಾಗಿದ್ದವುಗಳು. ಅವುಗಳನ್ನು ಪ್ರಕಟಿಸಿದ ಉಪಕಾರಕ್ಕಾಗಿ ಆ ಸಂಸ್ಥೆಗಳಿಗೆ ನಾನು ಕೃತಜ್ಞನಾಗಿದ್ದೇನೆ.

ಈ ಕೃತಿಯನ್ನು ಕಾಣಿಕೆಯಾಗಿ ಸ್ವೀಕರಿಸಲು ಸಮ್ಮತಿಸಿ ಶಿಷ್ಯನನ್ನು ಕೃತಕೃತಿಯಾಗಿ ಮಾಡಿದ ಗುರು ಹಿರಿಯಣ್ಣನವರ ಕೃಪೆಯು ಅಪಾರವಾದುದು. ಆದರಿಂದ ನನಗುಂಟಾಗಿರುವ ಹೆಮ್ಮೆಯೂ ಧನ್ಯತಾಭಾವವೂ ಬಲು ಹಿರಿಯದು.

**ಪು. ತಿ. ನರಸಿಂಹಾಚಾರ್.**

———

# ವಿಷಯ ಸೂಚಿಕೆ


| | ಪುಟಗಳು |
|---|---|
| ನಿವೇದನೆ | ೩ |
| ಮುನ್ನುಡಿ | ೫ |
| ಅರಿಕೆ | ೭ |
| ೧. ನನ್ನ ಹಾಡು | ೧೭ |
| ೨. ಗಾನವೆನ್ನೀ ಭುವಿಯನಾವರಿಪುದಾಗ | ೧೯ |
| ೩. ಶರದ ಮತ್ತು ಶರಚ್ಚಂದ್ರ | ೨೦ |
| ೪. ಇಂದೇನು ಬಾನಿನೊಳಗತುಲಲಾವಣ್ಯ | ೨೩ |
| ೫. ಬಾನ್ ತಿಳಿದಿತ್ತು | ೨೫ |
| ೬. ಯದುಗಿರಿ | ೨೭ |
| ೭. ಹೂಗಳೇತಕೆ | ೨೯ |
| ೮. ಆನಂದನ 'ಗೆಜ್ಜನ್ರ' | ೩೨ |
| ೯. ಹೆಣ್ಬೊಬ್ಬಳ ಕಣಸು | ೩೪ |
| ೧೦. ಬಯಕೆ-ಕೊಡಿಗೆ | ೩೬ |
| ೧೧. ಒಲುಮೆಯ ಬಳುವಳಿ | ೪೦ |
| ೧೨. —ಗೆ | ೪೧ |
| ೧೩. ಒಲುಮೆವೆಣ್ಣು | ೪೨ |
| ೧೪. ಕೊಳದ ತಡಿಯಲ್ಲಿ | ೪೫ |
| ೧೫. ಯುಗಾದಿಯ ಹಾಡು | ೫೦ |
| ೧೬. ಎರಡು ಹಕ್ಕಿ | ೫೩ |
| ೧೭. ಕಡುಸವಿಯಿಂಚರ ಕೊರೆಯಿತು ನನ್ನೆದೆಯ | ೫೫ |
| ೧೮. ಮಳೆಯು ನಾಡ ತೊಯ್ಯುತಿರೆ | ೫೭ |
| ೧೯. ಕಂಬನಿ | ೬೦ |

| | | |
|---|---|---|
| | | ಪುಟಗಳು |
| ೨೦. | ಕಣಿವೆಯ ಮುದುಕ | ೬೩ |
| ೨೧. | ಕಮಲೆ | ೬೬ |
| ೨೨. | ಏತಕೆ ? | ೭೧ |
| ೨೩. | ಹುಚ್ಚಿ | ೭೫ |
| ೨೪. | ಒಲುಮೆಹೊನಲ ತಡೆಗಳು | ೭೬ |
| ೨೫. | ಪತಿತಪಾವನ | ೮೦ |
| ೨೬. | ವಿಶ್ವಕುಟುಂಬಿಯ ಕಷ್ಟ | ೮೬ |
| ೨೭. | ರಂಗವಲ್ಲಿ | ೮೮ |
| ೨೮. | ‘ ಭೀಷಾಸ್ಮಾದ್ವಾತಃ ಪವತೇ ’ | ೯೪ |
| ೨೯. | ಅಭಿಸಾರಿಕೆ | ೯೫ |
| ೩೦. | ಗಾನ | ೯೭ |
| ೩೧. | ಯದುಗಿರಿಯ ಮೌನ ವಿಕಾಸ | ೯೯ |
| ೩೨. | ಬುದ್ಧ | ೧೦೪ |
| ೩೩. | ತಲಕಾವೇರಿಗೆ ಹತ್ತು ಮಾರುಗಳ ಹಿಂದೆ | ೧೦೫ |
| ೩೪. | ಯದುಗಿರಿಯ ಇರುಳು | ೧೦೬ |

# ಹಣತೆ

—

## ನನ್ನ ಹಾಡು

ಬಳ್ಳಿಯೊಡಲ ಕುಸುಮದಂತೆ
ಹದುಗಿದೆನ್ನ ಗೀತವು
ಮೆಲ್ಲನೊಡೆದು ಬರುವುದೆಂದು ?—
ಎಂದು ನಲಿವೆ–ಬೆದರುವೆ.

*   *   *

ಎದೆಯ ದುಗುಡವೆಲ್ಲವಳಿದು
ಕಣ್ಣನೀರು ಬತ್ತಿಹೋಗಿ,
ಕರೆ ಅದೊಂದು ಮಾತ್ರ ನಿಲ್ಲೆ,
ನನ್ನ ಹಾಡು ಬಿರಿವುದು.

ಬಾಳನೊಂದು ಹುಚ್ಚುಮಾಡಿ–
ದೊಲುಮೆರಾಗ ಉರಿದು ಹೋಗಿ,
ಅದರ ಬೂದಿ–ನೆನಪು–ನಿಲ್ಲೆ,
ನನ್ನ ಹಾಡು ಬಿರಿವುದು.

ಇರವು ಚಿರವು ಬಯಸಿದೊಂದು
ನಲವು ಬಂದು ನಮೆದುಹೋಗಿ,
ಬಯಕೆಯೊಂದು ಮಾತ್ರ ನಿಲ್ಲೆ,
ನನ್ನ ಹಾಡು ಬಿರಿವುದು.

*   *   *

## ಹಣತೆ

ಮುಗುದೆಯೊಡಲ ಪ್ರೇಮದಂತೆ
ಹದುಗಿದೆನ್ನ ಗೀತವು
ಬಗೆಯ ಗೂಡನೊಡೆಯುತೆಂದು
ಬರುವುದೆಂದು ಬೆದರುವೆ.

———

# ಗಾನವೆನ್ನೀ ಭುವಿಯನಾವರಿಪುದಾಗ

ಚೆಮ್ಮುಗಿಲ ತೋರಣವು ಬಾನಿನೊಳಗೇರೆ,
ಸ್ವರ್ಣರಥದೊಳು ಭಾನು ಮಲೆಮೇಲೆ ತೋರೆ,
ತಂಗಾಳಿ ಪೂಗಂಪ ದೆಸೆದೆಸೆಗೆ ತೂರೆ,
ಗಾನವೆನ್ನೀ ಭುವಿಯನಾವರಿಪುದಾಗ.

ಹಸುರುಹುಲ್ಲಿನ ಮೇಲೆ ಮೈಯೊರಗಿ ನೋಡೆ,
ತಿಳಿಬಾನ ನೀಲದೊಳು ಬಿಳಿಮೋಡವೋಡೆ,
ತಲೆಮೇಲೆ ಬನದೇವಿ ಪಿಸುಮಾತನಾಡೆ,
ಗಾನವೆನ್ನೀ ಭುವಿಯನಾವರಿಪುದಾಗ.

ಸಂಜೆಕೊನೆಗೆಂಪಾರೆ, ತಾರೆಗಳು ಬಿರಿಯೆ,
ಯಾಮಿನಿಗೆ ಮುತ್ತಿಡುತ ಚಂದಿರನು ಮೆರೆಯೆ,
ಕಣಿವೆಯೊಳು ತೊರೆ ಬನಕೆ ಜೋಗುಳವನುಲಿಯೆ,
ಗಾನವೆನ್ನೀ ಭುವಿಯನಾವರಿಪುದಾಗ.

ಕತ್ತಲೆಯು ತೆರೆಹೊದಿಸೆ, ಶಾಂತಿ ನೆಲಕಿಳಿಯೆ,
ತಾರೆಗಳು ಕಿರುದೆರೆಗಳುಯ್ಯಲೊಳು ನಲಿಯೆ,
ಜಗದ ಚೆಲ್ವಿನ ಪುರುಳ ಕಂಡಾತ್ಮ ತಣಿಯೆ,
ಗಾನವೆನ್ನೀ ಭುವಿಯನಾವರಿಪುದಾಗ.

———

# ಶರದ ಮತ್ತು ಶರಚ್ಚಂದ್ರ

ಶರದಳು ಋತುಗಳ
ಅರಸಿತಿ; ಸುಂದರಿ
ಹರಿಸುವಳುಲ್ಲಸವಂ ನಾಡೊಳ್.
ಧರಣಿ ರಮಣಿ ಮಿಗೆ
ಹರುಷದಿ ನಗುವಳು
ಮಿರುಗುವ ಹೊಸ ಹಸುರುಡುವುಟ್ಟು.

ತೊರೆ ಕಲ್ರೊಟ್ಟಲೊ-
ಳುರುಳುತ ಮೆಲ್ಲನೆ
ಹರಿವುದು ಹರಡುತ ಗೀತವನು;
ಶರದಳು ಗೀತಕೆ
ಸರಸದ ನಗೆಯನು
ಸೆರೆಯಿಸುತಿಂಪನು ಬೀರಿಹಳು.

ಶರದದಿ ಪ್ರೇಮದೊ-
ಳರಳುವ ಸುಮಗಳ
ತರಣಿಯರಿವನಾದರಿಸುವುದಂ.
ಸೆರಗ ಬಿಳಿ ಮುಗಿಲ
ಸರಿಸೆ ಶಶಿಕರವು
ಸಿರಿಮೊಗದೋರುವಳ್ ಕಿರುತಾರೆ.

ಇಂದುವು ಶರದದಿ
ಚೆಂದದ ಬಾಲ್ಯವ
ಪೊಂದುತೆ ನೀಲದೊಳಾಡುವನು;

## ಹಣತೆ

ಮುಂದೆ ಬಿಳಿ ಮುಗಿಲ
ಮಂದೆ ಓಡಿಬರೆ
ಹಿಂದೆ ಅವಿತು ತಾನೋಡುವನು.

ಉಡುಗಣ ಮಧ್ಯದೊ-
ಳೊಡೆಯನವೊಲು ಶಶಿ
ನಡೆಯನು ಶರದದಿ ಬಾನಿನೊಳು ;
ಅಡಿಗಡಿಗುಕ್ಕುವ
ಬೆಡಗಿನ ಶ್ರೀವಿಯು
ಉಡುರಾಜಗೆ ಮಧುಮಾಸದೊಳು.

ಕರಿ ಮುಗಿಲಿನ ತೆರೆ-
ಮರೆಯನು ಸೇರನು
ಶರದದಿ ತಾರೆಯನೊಲಿಸೆ ಶಶಿ ;
ತರುಣಿಯರಂದಕೆ
ಮರುಳಾಗುತ ತಾ
ಮರೆವುದು ನಮ್ಮನು ವರ್ಷದೊಳು.

ಮುದುವನು ಬೀರಹೆ
ಪೊದಕುಳಿಗೊಳ್ಳನು
ಮುದುಕನವೊಲು ಶಶಿ ಶರದಹೊಳು ;
ವೋದವು ಚೆದರಿದ
ಓದುಗನಂದದಿ
ಖೇದವ ತಳೆವುದು ಶಿಶಿರದೊಳು.

ಬಾಲನು ಶರದದಿ ;
ನೀಲದಿ ಸೇರುತ
ಬಳುಕುವ ಹೊಳಪಿನ ತಾರೆಗಳ
ಲೀಲೆಯು ಕಣ್ಣು-
ಚ್ಚಾಲೆಯನಾಡುತ
ನಲಿವನು, ನಗುಮೊಗ ತೋರುವನು.

ಶರದದಿ ಬಿಳಿ ಮುಗಿ-
ಲೆರಚಿರಲಾಗಸ
ಮೆರೆವುದು ಹಾಲ್ಗಡಲಂದದೊಳು ;
ತೆರೆಮೇಲ್ಚಿಮ್ಮುತ
ಬರುತಿರೆ ಚಂದ್ರಮ-
ನರಿವೆನು ಕಡಲೊಳು ಪುಟ್ಟಿದುದ.

ಶರದಳು ಋತುಗಳ
ಅರಸಿತಿ, ಅದರಿಂ
ಬೀರುವಳಾನಂದವ ಜಗಕೆ ;
ತೊರೆ ಬನ ಹಕ್ಕಿಯು
ಹರುಷವ ನಾಡೊಳು
ಮೂರುತ ತೂರುವನುಲ್ಲಸದಿ.

———

# ಇಂದೇನು ಬಾನಿನೊಳಗತುಲಲಾವಣ್ಯ

ಇಂದೇನು ಬಾನಿನೊಳಗತುಲಲಾವಣ್ಯ!
ಇಂದು ಬಿಳಿಮೋಡಗಳ ನಿರುಪಮದ ಬೆಡಗು!
ಇಂದು ತಿಳಿಬಣ್ಣಗಳ ಜೋಡಣೆಯ ಸೊಬಗು!
ಇಂದೇನು ಪಡುವಲೊಳು ಸಂತಸದ ಹರಿವು!—

ಎಂದು ನಾ ಕಣಿವೆಯೊಳು ತೊರೆಯ ಬಳಿ ನಿಂದು,
ಸಂದಣಿಸಿದಾನಂದ ಮೈಮರೆಸೆ ಕಂಡು,
ಕುಂದುಕೊರತೆಯ ಕಾಣದಾ ಲೋಕಕೇರಿ
ಹಿಂದಿರುಗೆ—ಸಂಜೆಯಾ ಸೊಬಗೆಲ್ಲಿ, ಎಲ್ಲಿ?

ಇನನೊಲುಮೆ ಹರಿದಾಟ ಬಾನಿನೊಳಗೆಲ್ಲಿ?
ಘನರನ್ನ ಪೊನ್ನುಡಿಗೆ ಮೋಡಗಳದೆಲ್ಲಿ?
ಬನದೆಲರೊಳೊಲವೂಡಿದಾ ಗಾನವೆಲ್ಲಿ?
ಮನದುಬ್ಬೆ ನೀಲದೊಳು ನಲಿನಲಿದುದೆಲ್ಲಿ?

ಮೇರೆಯುರಿಯುದೆ ಕಪ್ಪ ಕಾರುತಿದೆ ಬಾನು!
ದೂರ ಗುಡ್ಡದ ಹಿಂದೆ ಜಾರುತಿದೆ ರಂಗು!
ಗಿರಿಗೆ ಸಂಜೆಯ ತಡೆವ ಬಲುಮೆಯಿರದೇನು?
ತೊರೆಯ ಗೀತಕೆ ಸೋಲುತವಳುಳಿಯಳೇನು?—

ಈ ತೆರದಿ ಚಿಂತಿಸುತ ತೊರೆಗಿಳಿದು ನಾನು
ಯಾತನೆಯ ಕಳೆಯಲ್ಕೆ ದೇವನನು ನಮಿಸೆ,
ವಾತನಲುಗಿಸಿ ಕುಣಿಸಿದಾ ತೆರೆಯ ಮೇಲೆ
ಆತನಂತೆಯೆ ನಲಿವ ಚಂದ್ರಮನ ಕಂಡೆ.

ತಾರೆಗಳು ನೆರೆದಿಹವು ಬಾನ ಕಿಕ್ಕಿರಿದು !
ಕ್ಷೀರಪಥವಾಗಸಕೆ ಮೇಖಲೆವೊಲಿಹುದು !
ಕಿರುನಗೆಯ ಮನಸೆಳೆವ ಬಾಲಶಶಿ ಕುಜರು
ಕೊರಳಪ್ಪಿ ನಗೆ ಬೆಳಗಿ ಸರಿಯುತಿಹರಲ್ಲಿ !

ನೀಲದೊಳು ಸೊಗಯಿಸಿದ ನಿರುಪಮದ ಚೆಲುವ,
ಆಲಿಗಳ ಹಬ್ಬವನು, ನುಂಗಿದೀ ಕಪ್ಪು
ಬೆಳಗುವೀ ಜ್ಯೋತಿಗಳ ಪೆತ್ತಿರುವುದೇನು ?
ಅಳತೆಮೀರಿದ ಶಾಂತಿಸುಖದುಣ್ಮದೇನು ?—

ಎಂದು ಅಚ್ಚರಿಗೊಂಡೆ ಜ್ಯೋತಿಗಳ ಕಂಡು ;
ಅಂದು ಹೊಮ್ಮಿದ ದಿವ್ಯಶಾಂತಿಯನು ಉಂಡು,
ದಂದುಗದ ಸಂದಣಿಯನೆಣಿಸಿದೆನು ಅಂದು ;
ಮುಂದೊಗೆವ ಶಾಂತಿ ಸುಖಗಳ ತಾಯಿಯೆಂದು.

——

# ಬಾನ್ ತಿಳಿದಿತ್ತು

ಬಾನ್ ತಿಳಿದಿತ್ತು.—ಬಿಳಿಮುಗಿಲೋಳಿಯು
ಕೇಳಿಯ ದೋಣಿಯ ಹೋಲಿತ್ತು.
ಸರಸಿಗಳೆದೆಯೊಳು, ಬಯಲೊಳು, ಮಲೆಮೇಲ್
ಬೆಚ್ಚನೆ ಕಿರುಬಿಸಿಲೊರಗಿತ್ತು.
ಹಸುರೊಳು ಹಿಮಮಣಿ ರತ್ನಜ್ಯೋತಿಗ-
ಳಂಬನು ದೆಸೆದೆಸೆಗೆಸೆದಿತ್ತು.
—ಶರದದ ಹಗಲೊಳು ಚೆಲುವಿತ್ತು,
ಬಿಡುವಿತ್ತು,
ಕಳೆಯಿತ್ತು.

ಎಲೆ ಮೇಲುರುಳುತ ಮುತ್ತಿನ ಕಂಠಿಯ
ಕಮಲಕೆ ಕಿರುದೆರೆ ಹಾಕಿತ್ತು.
ತಣ್ಣನೆ ನುಣ್ಣನೆ ನುಸುಳುತ ಗಾಳಿಯು
ಬಳ್ಳಿಗೆ ಕಚಕುಳಿಯಿಡುತಿತ್ತು.
ಪೊದರೊಳು, ಮೆಳೆಯೊಳು, ಕ್ರೀಡಾವನದೊಳು
ಹಕ್ಕಿಯು ಹಾಡನು ಹರಡಿತ್ತು.
—ಶರದದ ಹಗಲೊಳು ಒಲವಿತ್ತು,
ಗೆಲವಿತ್ತು,
ನಲವಿತ್ತು.

ಆದೊಡೆ, ಪೂರ್ಣತೆಯುರಸುತ ದುಂಬಿಯು
ತೆರೆದೊಳಗೆನ್ನಯ ಒಲವಿತ್ತು.

ಚಿಂತೆಯ ಕಾರ್ಮುಗಿಲಿರುಳೊಳಗೆನ್ನೆದೆ
ಬೆಳಕನು ಕಾಣಲು ತವಿಸಿತ್ತು.
ಕನಸಿನ ನನಸಿನ ಅಂತರವಳೆಯುತ
ಬಾಳಿನೊಳುಲ್ಲಸ ಕುಗ್ಗಿತ್ತು,
ಬಲು ಕುಗ್ಗಿತ್ತು.

ಶರದದ ಗೆಲವಿನ ಹಗಲೊಳಗಿದ್ದಿತು
ನಾಕದ ನಲವಿನ ಸಂದೇಶ.
ಅಚ್ಚರಿ! ಬಾಳಿನ ಕುಗ್ಗನು ಹೆಚ್ಚಿಸು-
ತಿಹುದೀ ನಲ್ಮೆಯ ಸಂದೇಶ!

——

# ಯದುಗಿರಿ

(ಒಂದು ಹಾಡು)

ರವಿ ಮುಳುಗಲು, ಹೊನ್ನಿೞಲಿಯ
ಸಂಜೆಯು ಹೊಗರ್ ತೋರೆ,
ಸುಖಸ್ಪರ್ಶದ ಗಿರಿಮಾರುತ
ಉಲ್ಲಸವನು ಬೀರೆ,
ಖಗಸಂಕುಲ ಹಾರುತ್ತಿರೆ
ಕರಿಮೋಡದ ತೆರದಿ,
ಚೆಲುವುಕ್ಕಿದೆ, ಮುದ ಮೂಡಿದೆ
ಯಾದವಗಿರಿ ನಭದಿ.

ಬಾನ್ ಸರಸಿಯೊಳುಡುಗೊಂಚಲ
ಬಿಳಿನೈದಿಲೆ ಮಾಲೆ,
ಶಶಿಯಂಚೆಯು ಮುಲರಡವಿಯೊ-
ಳೀಜಾಡುವ ಲೀಲೆ,
ಕಲ್ತೊಟ್ಟಿಲ ತೊರೆ ಹಾಡುವ
ಮೃದುಮಂಜುಳ ಗಾನ;
ನೋಡಾಲಿಸು, ಕೋಡಿವರಿಯೆ
ಹೃದಯದ ಸುಮ್ಮಾನ.

ಋಷಿಮಂಡಲ ಮೃಗಶಿರಗಳು
ಗುಡಿಗೋಪುರ ಮುಟ್ಟಿ.
ನರಸಿಂಹನ ಶಿರಮುಕುಟಕೆ
ಮಣಿಹಾರವ ಕಟ್ಟಿ.

ತವರ್ಮೊಲುಮೆಯ ಕಾಣಿಕೆಯನು
ಸಲಿಸುತ್ತಿವೆ ನುತಿಸಿ,
ಗುಡಿಕಳಸವ ಶಶಿಯಡರಲು
ಹರಜೂಟವ ಸ್ಮರಿಸಿ.

ಅದೊ, ದೂರದಿ ಗಿರಿಪಂಕ್ತಿಯು
ಸಾಗರದಲೆಯಂತೆ
ಕಾಣುತ್ತಿದೆ ಮಬ್ಬೆಳಕೊಳು
ಸ್ಥಿರತೆಯು ಕಳೆದಂತೆ.
ಬಾನ್‌ಭೂಮಿಯನೊಂದುಮಾಡುವ
ಶಿಶು ಚಂದ್ರನ ಕಾಂತಿ,
ನಿಶ್ಶಬ್ದತೆ,-ಮತಿಗೀವುವು
ಭೂವಿಲಯದ ಭ್ರಾಂತಿ.

ಏನ್ ಶಾಂತಿಯು, ಸೌಂದರ್ಯವು
ಯಾದವಗಿರಿ ನಭದಿ!
ಏನ್ ಮೌನವು, ನೀರವತೆಯು
ಮಲೆತುದಿದೇಗುಲದಿ!
—ಈ ಶಾಂತಿಯೊಳಾಲಿಸದೋ,
ಉಡುಲೋಕದ ಗಾನ:
ಸಮಶ್ರುತಿಲಯ ಹೊಂದಿರುವೀ
ತನುಮುಚ್ಚಿಹ ಗಾನ!

——

# ಹೂಗಳೇತಕೆ

೧

“ ಬಲಿತ ಬಿಸಿಲೊ-
ಳಳಲಿ, ಮಗುವೆ,
ಹೂವನೇತಕಾಯುವೆ ?
ಅರಿವೆ ತುಂಬಿ
ಸುರಿಯುವಷ್ಟು
ಹೂಗಳಾವ ಆಟಕೆ ?

“ ಬವಣೆಗೊಂಡು
ಬೆವರು ಹನಿತು-
ದಣಿಕೆಮಾಡದಲೆಯುವೆ.
ಸುಡುವ ಕಲ್ಗ-
ಳೆಡೆಯನೆಣಿಸೆ.
ಹಸುಳೆ, ಹೂಗಳೇತಕೆ ? ”

ಎನಲು, ಮಗುವು—
ಇಣಿಕೆ ನಗೆಯು—-
ಹೊಳೆವ ಕಣ್ಣ ತೋರಿತು.
“ ಮಲೆಯನೇರಿ
ಕುಳಿತ ಸಿಂಗ-
ಗೀಯೆ ಹೂಗಳೆ”ಂದಿತು.

೨

“ ಗಿರಿಯನೇರು-
ತರಸಿದಲರ,
ಹಸುಳೆ, ಏತಕೆರಚುವೆ ?
ದೇವನಡಿಯೊ-
ಳವನು ಇಡದೆ
ಸುಮ್ಮನೇಕೆ ಬಿಸುಡುವೆ ?

“ ಮಲೆಯ ಸಿಂಗ
ಚೆಲುವನಲ್ಲ.
ವೆಂದು ಮನಕೆ ಹೊಳೆಯಿತೆ ?
ಹಸುಳೆ, ಹೀಗೆ
ಕುಸುಮಗಳನು
ಹೊರಗದೇಕೆ ಚೆಲ್ಲುವೆ ? ”

ಮಗುವು ಕೇಳಿ
ಬಿಗಿದ ಹುಬ್ಬ
ಕಣ್ಣ ಚೆಲುವ ತೋರಿತು.—
“ ಮಲೆಯ ಸಿಂಗ
ಚೆಲುವನಲ್ಲ,
ಅವನ ಕಂಡರಾಗದು.”

“ ಹಸುಳೆ, ಏಕೆ ? ”
“ ಬಿಸಿಲೊಳೊಣಗು-
ತವನಿಗೆಂದಿವಾಯ್ತೆನು.

ಗುಡಿಯೊಳಾತ-
ನೆಡೆಯ ಸೇರಿ,
ಕಸಿವನೆಂದು ಕಾದೆನು.

'' ಸೆಳೆದು ಮುಡುಪಿ-
ನಲರನೇತ-
ಕವನೆ ಮುಡಿಯಲಿಲ್ಲವು ?
ಅಲರನದಕೆ
ನೆಲದೊಳೊಗೆವೆ.
ಮಲೆಯ ಸಿಂಗಗೀಯೆನು.''

*　　*　　*

ಕಿರಿಯನುಲಿದ
ಸರಳ ನುಡಿಯೊ-
ಳೊಲುಮೆ ಪುರುಳ ಕಂಡೆನು.
ಗುಡಿಯೊಳಲರ
ಕೊಡದೆ ಮರೆಸಿ
ನಿಂತ ಭಾವವರಿತೆನು.

ನುಡಿಗೆ ನಾಚಿ
ಒಡಲೊಳವಿತು
ಕುದಿವ ಬಯಕೆ, ಗುಟ್ಟನು,
ಎದೆಯ ಹೊಕ್ಕು
ಕಸಿವ ಕ್ಷಣವ-
ನೊಲುಮೆ ಕಾದು ಕೊರಗುವಳ್.

———

# ಆನಂದನ 'ಗೆಜ್ಜಸ್ರ'

ಹೊನ್ನುಡೆಯ ತಿರೆಯುಡಲು, ಪಡುಗಡಲ ಮೇಲೆ
ಅರೆಮುಳುಗಿ ಕಿತ್ತಿಳೆಯ ತೊಳೆಯ ರವಿ ಹೋಲೆ;
ಅಪವಾದ ಭೀತಿಯೊಳು ಭೃಗು ಮೌನತಾಳಿ
ಬೆನಕ ಚೌತಿಯ ಶಶಿಯ ಸನಿಯದೊಳು ತೇಲಿ,
ಬಿಂಕದೊಳಗಿರುತಿರಲು; ಬಾಲಶಶಿ ಮನದಿ
ನಕ್ಕ ನಗೆಯುಕ್ಕಿಬರೆ, ಕೌತುಕದ ಭರದಿ
ಬಿಂಕವನು ಬದಿಗೊತ್ತಿ ಶುಕ್ರನಿಂತೆಂದಂ:
"ಚಂದ್ರಮನೆ, ನಗೆಯೇಕೆ? ನೆನೆದೆಯಾ ಹಿಂದಂ?"

ಎನಲು ಶಿಶುಶಶಿ ನುಡಿದನೀತೆರದಿ ಸಖಗೆ:
"ಹಿಂದ ನೆನೆಯುತ ನಗೆನು; ಮಗು ನುಡಿದ ನುಡಿಗೆ
ಮನಸೋತು ನಗುತಿರುವೆ ಹರುಷದೊಳು ಹೊರಳಿ.—
ಕಡುಚೆಲುವನೆಂದೆನ್ನ ಕವಿಜನವು ಹೊಗಳಿ
ಬಣ್ಣನೆಯ ಜಾಲದೊಳು ತಿರೆಗೆಳೆವರೆನ್ನ:
ಲಲನೆಯರ ಮೊಗ ನಾನು, ನಗೆ ನನ್ನ ಜೊನ್ನ;
ಕುಂಕುಮದ ಹಣೆಬೊಟ್ಟು; ಬಿಳಿಮೊಲ್ಲೆದಂಡೆ;
ಉಪವನದ ನೈದಿಲೆಯು; ನವನೀತದುಂಡೆ;
ಸಂಜೆಯಾ ಕನ್ನಡಿಯು; ಮಾಂತ್ರಿಕನ ಚೆಂಡು;
ಸರಸಿಯೊಳಗಿನ ಹಂಸ; ಹೊಸ ಬೆಳ್ಳಿಗುಂಡು.
ಎಲ್ಲಿ ಕಂಗೊಳಿಸುವುದೊ ಚೆಲ್ವಿಕೆಯ ಬೀಡು,
ಅಲ್ಲಿಗೆಳೆವರು ನನ್ನ—ಬೇಡೆನ್ನ ಪಾಡು.
ಇಂದು ಕವಿಗಳ ಹೋಲ್ಕೆ ಅಳಿದವರ ಸೊತ್ತು;
ಹೊಸದಿರದ ಬಣ್ಣನೆಗೆ ನೊಂದು ಬೇಸತ್ತು

ಅಲೆದೆನ್ನೈ ಅರಸುತ್ತ ಹೊಸದು ಸಾಮ್ಯವನು.—
ಪುಸ್ತಕದ ಚಿತ್ರದಲಿ ನನ್ನ ರೂಪವನು
ಆನಂದ ಹೋಲಿಸಲು ' ಗೆಜ್ಜೆಸ್ರ' ಕೆಂದು,
ನವಿರೆದ್ದು ನಲವುಕ್ಕಿ ಅಳಿದುದ್ಯೆ ಕುಂದು.''



೫

# ಹೆಣ್ಣೊಬ್ಬಳ ಕಣಸು

ದೊರೆಯ ನೋಡಲು ನೆರೆದ ಮಂದಿಯ
ಮಧ್ಯದೊಳಗೆ ಕಂಡೆನಾ ದಿನ,
ಎಂದೊ ಕನಸೊಳು ಕಂಡ ಧ್ಯೇಯದ
ಚೆಲುವಿನೊಂದು ಹೆಣ್ಣನು.

ಏನು ಸಿಂಗರ, ಏನು ರೂಪು,
ಏನು ನಿಲುವಿನ ಭಂಗಿ, ಬೆಡಗು,
ಏನು ಕಂಗಳ ಚೆಲುವು, ಹೊಳಪು !
ನಿಜದ ಹೆಣ್ಣೋ, ಸ್ವಪ್ನವೋ !

ಹಿಂದೆ ಕಂಡಿರಲಿಲ್ಲವವಳನು,
ಮುಂದೆ ಕಾಣುವ ಬಯಕೆ ಬಯಲು ;
ಅವಳು ನನ್ನವಳಾಗಲೆನಲೂ
ತೀರ ಚೆಲುವೆಯು ತರುಣಿಯು.

ಆದರೇತಕೊ ನಟ್ಟುಹೋದುವು
ಅವಳ ಮೊಗದೊಳು ಕಂಗಳೆರಡೂ.
ಅವಳದೊಂದೇ ನಗೆಗೆ ಜಗವನೆ
ಬೆಲೆಯ ಕಟ್ಟಿದೆನಾಗಲೆ.

ಒಲುಮೆಯೆನ್ನಲೆ ?—ಬಾಳ ಬೆರಸುವ
ಬಯಕೆಯೆದೆಯೊಳು ತುಡಿಯಲಿಲ್ಲವು.
ಮೋಹವೆನ್ನಲೆ ?—ನಗೆಯು, ನೋಟವು
ಸುಳಿಸಲಿಲ್ಲವು ಮಿಂಚನು.

ಬರಿಯ ಕೌತುಕವಾಗದಾಗದು—
ಅಂದು ಏನೋ ಕಲಕಿತೆದೆಯ.
ನನ್ನ ಬಾಳಿನ ಮುಬ್ಬಿನೊಳಗೆ
ನುಸುಳಿತೊಂದು ಬಯಕೆಯು—

ಬಿರಿದ ಹೂವಿಗೆ ಸೋತುಹೋದರು
ಕೊಯ್ಯದದನೇ ನೋಡುವಾಸೆಯು,
ಚೆಲುವೆ ನನ್ನವಳೆಂದು ಬಯಸದೆ
ಚಿರವು ನೋಡುವ ಬಯಕೆಯು.

* * *

ಮೊಗವು ಮರೆಸಿತು, ಆದರವಳಾ
ಮೂರ್ತಿ ನಿಂತಿತು ನೆನಪಿನೊಳಗೆ.
ಅಂಥ ಬಿಂಬವ ಧರಿಸಿದೆದೆಗೆ
ಹೀನರಾಗವು ಸುಳಿವುದೆ ?

——

# ಬಯಕೆ—ಕೊಡಿಗೆ

೧

ಚಪಲೆ ಬಯಕೆ ಕೊಡಿಗೆಗೊಂದು
ಗುಡಿಯ ಕಟ್ಟಿ ಕಾಯುವೆಂದು,
ಕೊಡಿಗೆ ತಡವ ಮಾಡಿ ಬಂದು
ಬಯಕೆಯಳಿವ ಕಂಡು ನೊಂದು
ಕಣ್ಣನೀರಿನೊಳಗೆ ಮಿಂದು
ಚರಮಕ್ರಿಯೆಯ ಸಲಿಪಳು.

೨

ರಮಣನೊಲವನಂದೆ ಬಯಸಿ
ಅವನ ಸೊಗಕೆ ಚೆಲುವ ಸವೆಸಿ
ಸಾಧ್ವಿ, ಆಸೆ ಸಲದೆ ನಶಿಸಿ
ಮರಣ ಶಯನವೇರಿಹಳ್.

ತರುಣಿ ಉಳಿಯುವಾಸೆ ಇಲ್ಲ;
ಶಯನತಲದೊಳವಳ ನಲ್ಲ
ಇಂದು ಒಲುಮೆಯುಳಿಯಬಲ್ಲ!
ಆರಕೆ ತುಂಬೆ ಕಾಣಲಿಲ್ಲ;
ಇಂದು ಶೂನ್ಯ ನೋಡಬಲ್ಲ!
ಇಗೋ ಅವನ ಭಾಗ್ಯವೆಲ್ಲ
ಕಣ್ಣ ನೀರಿನಲ್ಲಿ ತೋರಿ
ತೇಲಿ ಪೋಪುದು!

೩

ಪ್ರಣಯುವರಸುತೊಂದು ದುಂಬಿ
ಮೊಲ್ಲೆಮೊಗ್ಗನೊಂದ ನಂಬಿ
ತೋಟದೊಳಗೆ ಮೊರೆಯು ತುಂಬಿ
ಯುಗಗಳೆಣಿಸಿ ಹಗಲ ಕಳೆದು,
ಮೊಗ್ಗು ಬಿರಿಯದಿರಲು ಹಳಿದು
ತನ್ನ ಬಾಳ, ಹಾರಿತ್ತೈ.
ಅಂದು ಮಧುವು ಸೊಗವ ತೂರೆ,
ಮೊಗ್ಗು ಬಿರಿದು ಚೆಲುವ ತೋರೆ,
ಒಲುಮೆಹುಟ್ಟ ಕಂಪು ಸಾರೆ,
ಕೇಳ್ವರಿಲ್ಲ, ಕೊಳ್ವರಿಲ್ಲ.
ಮುದುರಿ ಜಾಡಿ ದಳಗಳೆಲ್ಲ
ತಿರೆಗೆ ಬಿದ್ದುವೈ !

೪

ಕಿಟ್ಟು ಕೂಸು. ಎಷ್ಟು ಆಸೆ
ಮಿಣುಕು ಹುಳುವು ಮಿನುಗಿ ಚಲಿಸೆ !
' ಕಿಟ್ಟು, ನೋಡೋ—ಅದೊ ತಮಾಷೆ ! '
ಎಂದನಣ್ಣ ಅಳುವ ನಿಲಿಸೆ,
ಹಸುಳೆ ಮಿಣುಕು ಹುಳುವ ಬೇಡಿ
ಆಸೆಸಲಿಸಲೆಂದು ಕಾಡಿ
ಅತ್ತು ಸೊರಗಿ ಹೋಯಿತಣ್ಣ,
ಆಗ ಹುಳುವ ಹಿಡಿಯನಣ್ಣ ;
ಮಿನುಗಿ ಮಾಯವಾಯಿತ್ತೈ.

ಸಂಜೆ ಜಾರಿ, ಇರುಳು ತೋರೆ,
ಚಂದ್ರ ಮುಗಿಲ ತೆರೆಯ ಸೇರೆ,
ಹೆಪ್ಪುವೋಡ ಕಪ್ಪುಕಾರೆ,
ಕೂಸಿನಣ್ಣ ಕಣಿವೆಯೇರಿ
ತವಕದೊಡನೆ ನಡೆಯುತಿದ್ದ.
ದಟ್ಟಪೊದರ ನಡುವೆ ಎದ್ದ
ಮಿಣುಕುಹುಳುವ ಕಂಡು ಹಿಗ್ಗಿ
ಮುಳ್ಳು ಮೆಳೆಯ ಮೇಲೆ ನುಗ್ಗಿ,
'ಕಾಲ ಹೂಳೆ ಕೆಸರು, ರಕುತ
ಮೈಯ ತೊಯ್ಯಲೇನು' ಎನುತ
ಅಳಲ ಜರೆದು, ಹುಳುವ ಹಿಡಿದು
ಕಣಿವೆಯೇರಿ ನಡೆದ ನಲಿದು.
ಏನು ಗೆಲವು ಅಣ್ಣಗಂದು,
ಕೂಸಿನಾಸೆ ಸಲಿಪೆನೆಂದು!
ಆದೊಡದನು ಮುಳಿಸದೊಂದು
ನಗೆಯನಳಿಸಿ ಮುಸುಕಿತಂದು.
'ಕಿಟ್ಟು, ಇದಿಗೊ, ಮಿಂಚುಹುಳುವು!
ಕೈಯ ನೀಡೊ, ಕೊಳ್ಳೊ, ಹುಳುವು!'
ಅವನ ದೈನ್ಯವದರ ಮುನಿಸ
ನಿಳುಹದಹಹ! ಅದರ ಹರುಷ
ಮರಳದಯ್ಯೊ!–ಅಣ್ಣ ಸುಯ್ದು
ಹೊರಗೆ ಬಿಸುಟ ಹುಳುವ ಬೈದು.
ಜೊನ್ನದೊಳಗೆ ಅದರ ಮಿನುಗು
ಲಯಿಸಿಹೋಯಿತು.

೫

ಕೊಡಿಗೆಯೊಂದ ಬಯಸಿ ಬಂದು
ಚಪಲೆ ಬಯಕೆ ಕುದಿಯುವಂದು,
ಕೊಡಿಗೆ ತಡವ ಮಾಡಿ ಬಂದು
ಬಯಕೆ ಬೂದಿ ಕಂಡು ನೊಂದು
ಕಣ್ಣನೀರಿನೊಳಗೆ ಮಿಂದು
ಚರಮಕ್ರಿಯೆಯ ಸಲಿಪಳೈ.

———

# ಒಲುಮೆಯ ಬಳುವಳಿ

ಎನ್ನ ಬಾಳಿನೊಳಿತ್ತು ಚೆಲ್ವಿಕೆ,
    ಬನ್ನಗಳು ನಿಡು ಸುಯ್ಯಲು,
ಗೆಲವು, ಗಾನವು, ಶಾಂತಿ, ಕ್ರಾಂತಿಯು,
ಒಲುಮೆ ನುಸುಳುವ ಮುಂಚೆಯೂ.

ಒಲುಮೆ ಸುಳಿಯಿತು, ಹಿಂದನಳಿಸಿತು,
    ಬಾಳಿಗೊಯ್ದಿತು ಮಿಂಚನು—
ಹೊಸಬ ರವಿಯನು, ಶಶಿಯ, ಚುಕ್ಕಿಯ,
    ಹೊಸದು ಕಂಪನು, ಗೀತವ.

ಬಾಳ ಗದ್ದುಗೆ ಮೇಲೆ ನಿಲಿಸಿದೆ
    ಬಾಳನಾಳಲು ಚೆಲುವೆಯ.
“ ಒಲುಮೆಯಾಳಲು, ಚೆಲುವೆಯಾಳಲು
    ಅಳಲಿಗಿರವೆ ? ” ಎಂದೆನು.

ರಾಣಿ ತಂದಳು—ದಿಟವು—ಬಾಳಿಗೆ
    ಬೀಣೆ ನುಡಿಯುವ ನನಸನು.
ಯಾರು ಕಾಣ್ಬರು ಅವಳಿ ತಂದಿಹ
    ದಾರುಣದ ಹೊಸ ಸುಯ್ಯಲ ?

——

# —ಗೆ

ಎನ್ನೆದೆ ಕತ್ತಲೆಗಂಜುತ, ನಲ್ಲೆ,
ಬೆಳಕನು ನೀ ತಂದೆ.
ಸೊಡರಿನ ಹೊಗರಿಗೆ ನಾಚಿತು ತಾರೆ ;
“ ಇನ್ನಿರುಳೆ ! ” ಎಂದೆ.
ನೀ ಮೃದುಹಾಸವ ಬೀರಲು, ನೋಟವು
ಸ್ನೇಹವ ಸೂಸುತಿರೆ ;
ನಿನ್ನುಸಿರುಪವನದೆಲರಿನ ಕಂಪನು,
ತಂಪನು ಜರೆಯುತಿರೆ ;
ಕೆನ್ನೆಯೊಳರಳಲು ರೋಜವು, ತುಟಿಯೊಳು
ಪ್ರಣಯವು ತೋರಿಬರೆ ;
ನನ್ನೀ ದೀವಿಗೆ ಸ್ತಿಮಿತದೊಳುರಿವುದು
ಹೊಸ ಹೊಗರೊಳು, ನೀರೆ.

ಆದೊಡೆ, ಪ್ರಿಯೆ, ನೀ ಭ್ರುಕುಟಿಯ ರಚಿಸಲು,
ಮೌನದಿ ತುಟಿ ಬಿಗಿಯೆ ;
ಚಿಂತೆಯ ಜವನಿಕೆ ನಗೆಯನು ಮರೆಸಲು,
ಕಣ್ಗಳು ನೀರ್ಗರೆಯೆ ;
ಕೋಪದ ವೇಗಕೊ, ಅಳಲಿನ ಭಾರಕೊ,
ಬೆಚ್ಚನೆ ನಿಡುಸುಯ್ಯೆ,
ಸೊಡರಲೆವುದು, ಹೃದಯವ ದಹಿಪುದು,—ಇದ-
ನಚ್ಚರಿ, ನೀನರಿಯೆ !

——

# ಒಲುಮೆವೆಣ್ಣು

೧

ಎದೆಯ ಹೊಸಿಲಿನೆಡೆಯೊಳಿಂತು
ನಿಲುವ ಪೆಣ್ಣದಾರ್ಯೆ ?
' ಕದವ ತೆರೆಯೊ ! ' ಎನದೆ ಮೌನ-
ದಿಂದ ನಿಲುವಳಾರ್ಯೆ ?

ನೀಲದಾಳ ಕಣ್ಣಿನಾಳ,
ಬಾಳಿನಲಗು ನೋಟವೈ.
ಬಾಳನೆಲ್ಲನೊಂದೆ ಕ್ಷಣದಿ
ಬಿಚ್ಚಿಬಿಡುವ ದಿಟ್ಟಯ್ಯೆ.

ಸುರುಳಿಸುತ್ತಿ ಕುಣಿವ ಕುರುಳು,
ಸುಳಿಯು ಗಲ್ಲ ಚಂದವೈ.
ಇರುಳಿನಂತೆ ಕಬರಿ, ಬಳ್ಳಿ-
ಯಂತೆ ನಿಲುವ ಭಂಗಿಯ್ಯೆ.

ರೋಜದಂತೆ ಕೆನ್ನೆ, ರೋಜ-
ದೆಸಳಿನಂತೆ ತುಟಿಗಳ್ಳೆ.
ರೋಜದಂತೆ ನಗುವ ಬಾಯಿ,
ಕಂಪಿನಂತೆ ಲಜ್ಜೆಯ್ಯೆ.

ಮುಡಿಲೊಳಾವುದನ್ನೊ ಮರೆಸಿ
ನಾಚಿ ಮುಗುದೆ ನಿಲುವಳ್ಳೆ.
ಬೆಡಗಿ ಯಾರು ? ಎದೆಯ ಹೊಸಿಲೊ-
ಳೀಕೆಗಾವ ಕಜ್ಜವೈ ?

೨

ಬೆದರಿ ನಾಚಿ ಬಯಕೆಯುದುಮಿ
ನಿಂತ ಚೆಲುವೆ ಒಲುಮೆಯೈ.
ಎದೆಯ ಬಳಿದೊಳಂದೆ ನಿಂತ-
'ಳಿದೆಯ ತೆರೆಯೊ' ಎನ್ನಳೈ.

ನೂರು ವರುಷ ಮೌನ ತಾಳಿ
ನಿಲುವಳಿಂತು ಹೊಸಿಲೆಡೆ.
'ಯಾರು?' ಎನ್ನದಿರಲು ಕೊರಗಿ
ನಶಿಸಿ, ನಂದಿಪೋಪಳು.

ಸೆರಗ ಹಿಡಿದು ಕಾಡು, ಕೆಳೆಯ,
ಮರೆಸಿ ತಂದ ಕೊಡಿಗೆಯ
ತರುಣಿ ಕೊಡಳು ಕಾಡದಿರಲು—
ಕೊಡುವ ಬಯಕೆ ಇರಿದರೂ.

ನಲ್ಲನೊಸಗೆಯಿರುಳೊಳೊಲಿಸಿ
ಕಸಿಯದಿರಲು ಮುತ್ತನು,
ನಲ್ಲೆ ತಾನೆ ಕೊಡುವಳೇನು—
ಕೊಡುವ ಬಯಕೆ ಇರಿದರೂ?

ಅಂದು ಕೃಷ್ಣನೆರೆವ ಮುನ್ನ
ಕೊಟ್ಟನೇ ಕುಚೇಲನು
ಚಿಂದಿಯೊಳಗೆ ತಂದ ಪುರಿಯ—
ಕೊಡುವ ಬಯಕೆ ಇರಿದರೂ?

## ಹಣತೆ

ಒಲುಮೆವೆಣ್ಣೆ ಕಾಡಿ ಕಸಿವ
ಮುನ್ನ ಕೊಡಳು ಕೊಡಿಗೆಯ :
ಬೆಳಕದೊಂದನೊಯ್ದು ಬಾಳ
ಹೊಸದು ಮಾಳ್ಪ ಕೊಡಿಗೆಯ.

ಎದೆಯ ಹೊಸಿಲ ಬಳಿಯೊಳೆಂದು
ನಿಲುವ ಪೆಣ್ಣು ಒಲುಮೆಯೈ
ಕದವ ತೆರೆಯದಿರಲು ಬೇಡ-
ಳಲ್ಲಿ ನಶಿಸಿ ಪೋಪಳೈ.

---

# ಕೊಳದ ತಡಿಯಲ್ಲಿ

೧

ಪಡುವಣ ಕಡಲೊಳು ಹೊಂದರೆ ಹೊರಳುತ
ಕರಗಿತು ನೀಲದೊಳು ;
ಉಡುಗಣದೊಡೆಯನ ಚೆಲುವಿಮ್ಮಡಿಸಿತು
ಸಂಜೆಯ ಸೊಬಗಿನೊಳು.

ಇನಿಯಳನೊಲಿಸಲು ಕೋಗಿಲೆ ಕರೆಯುವ
ಹಾಡನು ಚೆಲ್ಲಿತೆಲರ್ ;
ಬಾನಿನ ಚೆಲುವನು ಕದ್ದಲೆವಲೆಗಳ
ನಗೆಯನು ತೂರಿತೆಲರ್.

ಒಲವಿಂದೆನ್ನೆದೆಯದುರಿದ ಸಂಜೆಯ
ಸುಳಿದುವು ನೆನಪುಗಳು ;
ಚೆಲುವೆಯ ಕಡೆಗಣ್ಣೋಟಗಳೆನ್ನೊಳು
ಸುಳಿಸಿದ ಮಿಂಚುಗಳು ;

ಕೊಳದೊಳು ಕುಳಿತಂದೊಲವೆಮಗುಸುರಿದ
ಬಗೆಬಗೆ ಗುಟ್ಟುಗಳು ;
ಇಳೆಯನು ಸಗ್ಗಕೆ ಮಿಗಿಲೆನಿಪಚ್ಚರಿ-
ಯೊಲವಿನ ರೀತಿಗಳು ;

ಕೈಯನು ಹಿಡಿಯಲು ತಗ್ಗುತ ಲಜ್ಜೆಯೊ-
ಳರಳಿದ ಸಿರಿಮೊಗವು ;
ಬಾಯೊಳು " ಬಿಡು ಬಿಡು " ಎಂದರು, ಕಂಗಳು
" ಬೇಡೆ " ನ್ನುವ ಚೆಲುವು.

೨

ಮುದವನು ಸುರಿವೀ ನೆನಪುಗಳೆಡೆಯೊಳು
ಸುಳಿದುವು ನೋವುಗಳು :
ಹೃದಯಕೆ ಬೆಳಕಂದಿತ್ತೊಲವೆನ್ನನು
ದಹಿಸಿದ ನೋವುಗಳು ;

ಒಲುಮೆಯೆ ಕಟ್ಟಿದ ಸೊಗಸಿನ ನಾಡಿಂ-
ದುರುಳಿದ ನೆನಪುಗಳು ;
ಒಲುಮೆಯು ಬೆಸೆದಿರುವೆದೆಗಳನಗಲಿಸೆ
ಮನುಜನ ಯತ್ನಗಳು ;

ಎದೆಯೊಳು ಮೊಗವಿಟ್ಟೆನ್ನೊಳು ಸುರಿಸಿದ
ದೈನ್ಯದ ನೋಟಗಳು ;
ಹೃದಯದ ಯಾತನೆಯುಕ್ಕಲು ಕಣ್ಣೊಳು,
ಉದುರಿದ ಮಾತುಗಳು—

" ನಡೆಯೆನ್ನೊಲವೇ, ನಿನ್ನೊಡಗೂಡುವ
ಸುಖಕೆಡೆಯಲ್ಲಿಳೆಯು.
ಒಡೆಯುವ ಗಿರಿಯೆಡೆ ನದಿಯಂತೊಡೆವೆವು,
ಸ್ಥಿರವಲ್ಲಗಲಿಕೆಯು.

" ತಾರೆಯೊಳದುರುವ ಬೆಳಕಂತೆದೆಯೊಳ-
ಗೆಸೆವುದು ನಿನ್ನೊಲವು ;
ಆರದೆ ಕಂದದೆ ಕಾಲದ ಹರಿವೊಳು,
ಕಳೆಯೇರುವುದೊಲವು.

"ಸೀತಾ, ನಡೆ ನಡೆ,—ಮರೆಯುತಲೆನ್ನನು
ಕಳೆಯಿರವನು ಸುಖದಿ.
ಯಾತನೆಯುರಿಯೊಳು ಕೊಳೆಯುಳಿದೊಲವಿಂ
ಕಡೆಗಪ್ಪುವೆ ದಿವದಿ."

—ಎಂದೀ ನುಡಿಗಳ ಕೇಳಲು, ಚೆಲುವೆಯ
ಮಳೆಗರೆದುದು ಕಣ್ಣು :
ಹಿಂದೆ, ಕರಿಮುಗಿಲ ಕಿರುಮಿಂಚಂದದ
ನಗೆದೋರಿದ ಕಣ್ಣು.

೩

ಅಲೆವಿಂತೆನ್ನನು ಕನಸಿನ ನಾಡೊಳು
ಎಚ್ಚರಿಸಿತು ದನಿಯು :
ಕೊಳವಗಲಲು ಮನಬಾರದ ನೀರಿನ
ಗುಳು ಗುಳು ಗುಳು ದನಿಯು.

ಕೊಡದೊಳು ನೀರನು ತುಂಬಲು ಬಗ್ಗಿದ
ಕಂಡೆನು ಲಲನೆಯನು—
ದಡದೊಳು ಹೂವಿನ ಭಾರದಿ ಬಳ್ಳಿಯು
ಬಗ್ಗಿರುವಂದವನು.

ತರುಣಿಯ ಕರವನು ಶಶಿ ಅಲೆಯೇರುತ
ಮುತ್ತಿಟ್ಟದುರಿದನು ;
ಸೆರಗನು ಚಿಮ್ಮಿಸಿ ಕುರುಳನು ಕುಣಿಸುತ
ಸುಳಿದನು ಮಾರುತನು.

ಇರುಳಿಣಿಕಲು ಕಳಿಯೇರಿದ ಜೊನ್ನದೊ-
ಳಿಸೆದುದು ಸಿರಿಮೊಗವು—
ಅರುಣನು ತಲೆದೋರುತ್ತಿರೆ ಕಂದುವ
ತಾರಗೆವೊಲು ಚೆಲುವು.

ಹರುಷದ ನೋವಿನ ತುಮುಲದಿ ನಡುಗಿತು
ತರುಣಿಯ ಕಾಣುತೆದೆ—
ಸೊರಗಿದ ಸಂಜೆಯು ಸಂಪಗೆಯಂದದ
ಮೊಗದ ಚೆಲುವೆ ಸೀತೆ!

"ಮನದುದ್ವೇಗದ ಹೊರಹೊಮ್ಮೀ ಮೊಗ;
ದಿಟವಲ್ಲಿದರಿರವು!"
ಎನಿಸಿತು ಸೀತೆಯ ಯಾತನೆ ಮುಸುಕಿದ,
ಚೆಲುವೋಡಿದ ಮೊಗವು.

ಬೆರೆಯಿತು ನೋಟವು ನೋಟದಿ—ಸೀತೆಯ
ಮಿಂಚುಗುಳದು ಕಣ್ಣು;
ಹರುಷದ ಬೆಳಕಿನ ಆಟವ ತೋರದು
ಚೆಲುವೆಯ ಕುಳಿಗಣ್ಣು.

ಎಲೆಮರೆಯೊಳಗಂದಾಲಿಯ ದೆಸೆದೆಸೆ-
ಗಲೆಸಿ ಹೊಳೆದ ಕಣ್ಣು—
ಬಿಳಿಯ ಗುಲಾಬಿಯೊಳದುರುವ ದುಂಬಿಯ
ನೆನಪ ತರದು ಕಣ್ಣು.

ಪ್ರಾಯದ ಹೊಳಪನು ತೋರದು—ಎನ್ನೆದೆ
ಚಿಮ್ಮಿತು, ಮುದಸೂಸಿ

ಗಾಯವ ಮಾಯಿಸುತೊಲುಮೆಯ ಹರಿವೊಳು
ಸಂತೈಸಲು ಬಯಸಿ.

"ಮುದವೆರೆಯುರಳಿತು ಕಣ್ಮಲರೆ"ಂದೆನು,
"ಕಂದಿತು ಮುದವಾರೆ."
ಚೆದರಿಸೆ ಮನುಜನಿಗೆಷ್ಟದು ಸುಲಭವು
ಚೆಲುವನು, ಒಲವಾರೆ!

ಕ್ಷಣವೊಂದಚ್ಚರಿ ತೋರುತ ಸೀತೆಯು
ಹಿಂದಿರುಗಿತು ಕಣ್ಣು—
ಕ್ಷಣವೆವೆ ಮುಚ್ಚಿತು ಹದುಗಿದ ನೋವನು
ಹೊರಚೆಲ್ಲುತ ಕಣ್ಣು.

ಕಳೆದಾ ಸಂತಸ, ಇಂದಿನ ಯಾತನೆ—
ನಡುವೆಷ್ಟಂತರವು!
ತುಳುಕಿತು ಕಲ್ಲೆದೆ ಕರಗಿಸುತೆನ್ನಯ
ಕಣ್ಣೀರಿನ ಹರಿವು.

ಹಿಂದೀ ಕೊಳದೊಳಗತ್ತೆವು, ಬೆರೆಯಿತು
ಎದೆನೋವಿನ ನೀರು.
ಇಂದಾದೊಡೆ, ಹಾ! ಎನ್ನೆದೆ ನೆನಸದು
ಸೀತೆಯ ಕಣ್ಣೀರು!

——



೭

# ಯುಗಾದಿಯ ಹಾಡು

೧

ಏಳಿ ರವಿಯು ಮೂಡುವೊಳಗೆ
ಬಾನ ತಳಿರು ಬಾಡುವೊಳಗೆ
ಇಂದು ಮಧುವು ಜನವ, ಜಗವ
ಮುದದಿ ತೇಲಿಸುತ್ತ ಬರುವ!

ಇಂದು ಯು—ಗಾದಿಯು,
ಹೊಸ ವರ್ಷದಾದಿಯು!

೨

ಬೇವು ಚಿಗುರ, ಹೂವ, ಹಣ್ಣ,
ಮಾವುತಳಿರ ತನ್ನಿರಣ್ಣ.
ದಿಟ್ಟ ಕಚ್ಚೆ ಹಾಕಿ, ಶಿಖೆಗೆ
ದವನ ಸುರಗಿ ಸೆಕ್ಕಿರಣ್ಣ.

ಹಹ್ಹೊ! ಯು—ಗಾದಿಯು,
ಹರುಷಕೆಲ್ಲ ಗಾದಿಯು!

೩

ಹಳೆಯದೆಲ್ಲ ಮರೆಯಿರ್ರೈ,
ಹೊಸದು ಬಾಳ ತೆರೆಯಿರ್ರೈ,
ಕಳೆದ ವರುಷಕಿಂದು ಒಂದೆ
ಕಣ್ಣಹನಿಯ ಸಲಿಸಿರ್ರೈ.

ಮುಪ್ಪು ಹರೆಯ ಮರೆಯುತ,
ಬೆಪ್ಪ, ಜಾಣ ಬೆರೆಯುತ—
ಲಗ್ಗೆ ಚೆಂಡು, ಚಿಣ್ಣಿಕೋಲು,
ಏಣಿ ಉಯ್ಯಾಲಾಡಿರೈ.

೪

ಹಬ್ಬದೂಟ ಉಣುವ ಮುನ್ನ
ಬೇವುಬೆಲ್ಲ ಸವಿಯಿರಣ್ಣ :
“ನೂರು ವರುಷ ಬಾಳುವ,
ಸಾವ ದೂರಮಾಡುವ,
ವಜ್ರಕಾಯರಾಗುವ,
ಸಿರಿಯ ಸುಖವ ಕಾಣುವ”
ಎಂದು ಬೆಲ್ಲ ಮುಂದುಮಾಡಿ
ಬೇವು ಬೆಲ್ಲ ಮೆಲ್ಲಿರಣ್ಣ.

ಹಿರಿಯ ಜನಕೆ ನಮಿಸಿರಯ್ಯ.
ಹರಸಿ “ಸುಖಿಸಿ” ಎಂಬರಯ್ಯ.
ಗಂಟೆನಾದ ಕೇಳಿರೈ,
ಗುಡಿಗೆ ನಡೆವ ಬನ್ನಿರೈ.
ಭಕ್ತಿಗೂಡಿ ನಲವನದುಮಿ,
“ಆಸೆ ಸಲಿಸು, ಭಯವನೊರಸು,
ಇಂಥ ಹಬ್ಬ ನೂರ ಕರೆಸು”
ಎಂದು ಕರವ ಮುಗಿಯಿರೈ.

೬

ಅಹ್ಹಾ! ಬಲ್ಲೆ ನಿಮ್ಮ ಮನವ:
ಹಳೆಯ ವರುಷದಳಲ ನಲವ-
ನಿಂದು ನೆನೆದುಕೊಳ್ಳಿರಯ್ಯ.
ಮುಂದ ನೋಡಿ, ಇರುಳ ಕಂಡು,
ಬೆಳಕನರಸಿ ದುಗುಡಗೊಂಡು,
ಅಳಲಿ, ಬೆದರಿ, ಸುಯ್ವಿರಯ್ಯ.
        ಬೆದರಲೇಕೆ ?
        ಸುಯ್ಯಲೇಕೆ ?
ಭುಜವ ತಟ್ಟಿ ನಿಲ್ಲಿರಯ್ಯ.
ನಮ್ಮ ಹಕ್ಕು ಹರುಷವಯ್ಯ.
ಹೋದುದೆಲ್ಲ ಹೋದುದೈ.
ಹೊಸದು ಬಾಳು ನಮ್ಮದೈ.
        ಇಂದು ಯು—ಗಾದಿಯು,
        ನಮ್ಮ ಒಸಗೆಯಾದಿಯು!

———

# ಎರಡು ಹಕ್ಕಿ

ಗೂಡಿನೇಕಾಂತದೊಳು ಯೋಚಿಸಿತು ಹಕ್ಕಿ :
"ಹಾಡಿನಿಂಪಿಗೆ ಶಿರವನೊಲೆಯದವರಾರು ?
ಕಾಡ ಕತ್ತಲೆ ಕರಗಿ ಪೋಪುದು ;
ಮೂಡದೆಸೆಯೊಳು ರಾಗ ಮೊಳೆವುದು ;
ಬಿರುಸನುಳಿವನು ಚಂಡಮಾರುತ ;
ತೊರೆಯು ಮೊರೆ ಶ್ರುತಿಯಪ್ಪುದು."
ಗೂಡಿನೊಳಗೀ ತೆರದಿ ಯೋಚಿಸಿತು ಹಕ್ಕಿ :
"ಹಾಡಿನಿಂಪಿನ ಸೆರೆಗೆ ಸಿಲುಕದವರಾರು ?"—
ಹಾಡ ಸೆರೆಯನು ಉಷೆಯು ಬಿಡಿಸಿದ,
ಕಾಡ ಕತ್ತಲೆ ನೇಸರಳಿಸಿದ,
ಗಾಳಿ ಬಿರುಸನು ಮರವು ತಡೆದುದ,
ಬಯಲು ತೊರೆಮೊರೆಯಿಳುಹಿದ—
ಪರಿಯನೆಂತರಿಯುವುದು ಮೌಢ್ಯದೊಳು ಹಕ್ಕಿ,
ಮರವಿತ್ತ ನೆಮ್ಮದಿಯ ಬಿಂಕದೊಳು ಸಿಕ್ಕಿ ?

ತನ್ನೊಳಗೆ ಚಿಂತಿಸಿತು ಮತ್ತೊಂದು ಹಕ್ಕಿ :
"ಎನ್ನ ಹಾಡಿಗೆ ಲೋಕ ಮೆಚ್ಚುವುದೆ ಹುಚ್ಚು !
ನನ್ನ ಸಂತಸ ಹೊಮ್ಮೆ ಹಾಡುವೆ;
ಬನ್ನಗಳ ಹೊರದೂಡೆ ಹಾಡುವೆ;
ಎನ್ನ ಕರಣಗಳುಣುವ ಪ್ರಕೃತಿಯ
ಚೆಲುವ ತೇಗುವೆ ಹಾಡೊಳು."
ಇಂತು ಸಂತುಷ್ಟಿಯನು ಪಡೆಯಿತಾ ಹಕ್ಕಿ,
"ಎಂತು ಮೆಚ್ಚಿಪನಿಳೆಯ" ಎಂಬ ಕೊರೆ ಮುಕ್ಕಿ.

ಒಂದು ದಿನ ನಾ ಮರದ ನೆರಳಲೊರಗಿರಲು,
ಮಂದದಿಂ ದನಿತೋರಿತಾ ಮೊದಲ ಹಕ್ಕಿ—
ಉಷೆಯ ಕಾಂತಿಯನಳಿದು, ಸಂಜೆಯ
ರುಷೆಯ ಹೊರಚೆಲ್ಲುತ್ತ, ರಜನಿಯ
ಮಸಿಯ ಕಡೆಯುವ ಕೋಲುಮಿಂಚಿನ
ಚೆಲುವ ತೋರಿತು ಗಾನವು.
ಗಾನವನು ಕೇಳಿ ನಾ ಶಿರವ ತೂಗಿದೆನು,
"ಏನು ಸೊಂಪಿನ ಗಾನ! ಭಾಪು ಭಾಪೆ"ಂದು.

ಮೌನ ಮರಳಿತು ವನಕೆ—ಒಂದು ಕ್ಷಣ ಮಾತ್ರ.
ಏನು ಕಾಣ್ಬುದು ಮತಿಗೆ?— ಸವಿಗನಸೆ, ನನಸೆ?
ಸಿಂಗರದ ಮಧುಮಾಸ, ಮುಗುದೆಯ
ಸಂಗವೀಯುವ ಹರುಷ, ಅಳಲಿಗೆ
ಕಂಗಳಳಿಸುವ ಮಳೆಯು, ತ್ಯಾಗದ
ಶಾಂತಿ, ಮುಕ್ತಿಯ ಸೌಖ್ಯವು—
ಇಂತು ಭಾವಗಳೆದ್ದು ಥಟ್ಟನಳಿಯಲ್ಕೆ,
ಭ್ರಾಂತನಾಗುತಲಿದ್ದೆ ಬೆಸನವೇನೆಂದು:
ಚಿಕ್ಕ ರೆಂಬೆಯ ಮೇಲೆ ಎರಡನೆ
ಹಕ್ಕಿ ಕೊರಲನು ಕೊಂಕಿಸುತ ತಾ-
ನಕ್ಕರೆಯೊಳೆರೆಯುತಿಹ ಹಾಡಿನ
ಕೊನೆ ಚರಣ ತುಸ ಕೇಳಿತು.
ಹಕ್ಕಿ ಹಾಡಿದುದಿಂಪೆ?—ಎಂತು ಪೇಳಲಿ ನಾನು
ಹಕ್ಕಿ ಹಾಡಿತೆ ಎಂಬ ಸಂಶಯದೊಳಿರಲು!

———

# ಕಡುಸವಿಯಿಂಚರ ಕೊರೆಯಿತು ನನ್ನೆದೆಯ

೧

ಮುಗಿಲಿನ ಬಾಗೆಯ ಹೂಗಳನೆರಚುತ
ಸಂಜೆಯು ಸಾಗಿತ್ತು.
ಖಗಗಳ ಮನೆವೊಗುವುಲ್ಲಸದಿಂಚರ-
ವೆಲ್ಲೆಡೆ ಹರಡಿತ್ತು.
ವಿಧ ವಿಧ ವಾದ್ಯಗಳೊಮ್ಮೆಯೆ ಶ್ರುತಿಯೊಳು
ಬೆರೆಯುವ ತೆರನಿಂತೊ ?
ಹೃದಯದ ಮೋದಗಳೆಲ್ಲಕು ನುಡಿಗೊಡೆ
ಹೊರಹೊಮ್ಮುವುದಿಂತೊ ?
ಹಾಡುತಲೀಪರಿ ಗೂಡನು ಸೇರುವ
ಖಗಗಳನುಲ್ಲಸದಿ
ನೋಡುತ ನಿಂತೆನು—''ಹರುಷದ ಹೊಮ್ಮಿದು
ನಿಜ''ವೆಂದೆನು ಮನದಿ.

೨

ಪಡುವಣ ದೆಸೆಯೊಳು ಕೆಂಬೆಳಕಾರಿತು,
ಧರೆಗಿಳಿಯಿತು ಬಿಡುವು.
ಮಿಡುಕುವುವೇತಕೆ ಗೂಡಿನ ಸನಿಯದಿ
ಹಕ್ಕಿಗಳಂತರದಿ ?
ಅದಿಗೋ ! ಮರದಡಿ ಕವಣೆಗೆ ಗೋಲಿಯ
ಹೂಡುವ ಬೇಡನನು.
ಮುದಕೆಳಸಿರುವಗೆ ಕರುಣೆಯು ತೋರ್ಪುದೆ ?
ಸುರಿವನು ಕಲ್ಮಳೆಯ.

ಸುತ್ತುತ ನೊಂದಿವೆ, ಸಂಜೆಯ ಬಿಡುವಿಗೆ
ಬಯಸಿವೆ ಕಾತರದಿ.
ತುತ್ತಿಗು ಸಾಲವು—ಪುಟ್ಟವು. ಬೇಟೆಯ
ವೋದಕೆ ಕೊಲ್ಲುವುದೆ ?

ಕತ್ತಲು ಕವಿಯಿತು, ಮೌನವು ನೆರೆಯಿ:ತು,
ಜಗಕಾಯಿತು ಬಿಡುವು.
ಎತ್ತಲು ಶಾಂತಿಯು, ಬವಣೆಯ ಮಾರ್ದನಿ
ಹಕ್ಕಿಗಳುಲುಹೊಂದೆ.

ಕವಣೆಯು ಸುಯ್ದಿತು, ಕಲ್‌ಮಳೆ ಕರೆಯಿತು—
ಇರುಳೊಳು ಹಕ್ಕಿಗಳ
ಬವಣೆಯ, ದೈನ್ಯದ, ಕಡುಸವಿಯಿಂಚರ
ಕೊರೆಯಿತು ನನ್ನೆದೆಯ.

ಸೊಗಸಿನ ಸಂಜೆಯೊಳಿಂಚರ ಹರಡಲು
"ಹರುಷದ ಹೊಮ್ಮೆ"ಂದೆ.
ಖಗಗಳ ಗಾನದೊಳಿನಿತಳಲಿದ್ದುದ-
ನೆಂತರಿವೆನು ಆಗ !

———

# ಮಳೆಯು ನಾಡ ತೊಯ್ಯುತಿರೆ

ಮಳೆಯು ನಾಡ ತೊಯ್ಯುತಿರೆ,
ಮಿಂಚಿಗಿರುಳು ಬೆದರುತಿರೆ,
ಗೂಡ ಮುದ್ದುಗೊಲ್ಲನೆಡೆಯೊಳೊಂದು ಹಣತೆ ಮಿನುಗುತಿರೆ,
ಮುದವದೊಂದು ಮೊಳೆವುದು,
ಬಗೆಯ ಕಣ್ಣ ತೆರೆವುದು.

ಹಿಂದೆ ಸೆರೆಗೆ ಸಿಲುಕುತ,
ಕಂಸಭಯಕೆ ನಡುಗುತ,
" ಹಡೆದ ಕೂಸು ಬಾಳ್ವುದೆಂತು ! " ಎನುತ ತ-ಲ್ಲಣಿಸುತ
ನೊಂದ ಪಿತರ ಚಿತ್ರವ
ಕಾಂಬೆ, ಕೃಷ್ಣನುದಯವ.

ಒಲುಮೆ ತೊಡರ ಕಳಚಲು,
ತಂದೆ ಶಿಶುವನಪ್ಪಲು,
ತಾಯಿ ಕೊಡುವ ಕೊನೆಯ ಮುತ್ತು ಕಂಬನಿಯೊಳು ನೆನೆಯಲು,
ಒಯ್ದನಂದು ಶಿಶುವನು
ಬೆಳಗೆ ಗೋಪಗೃಹವನು.

ಸಾಸಿರಹೆಡೆ ಸರ್ಪವು
ಸೋನೆಗಾಗೆ ಛತ್ರವು,
ಮಾಯೆಸಿದ್ರೆಗಂದು ಜಗವೆ ಕೆಡೆಯಲಡಗೆ ಶಬ್ದವು,
ಯಮುನೆ ಬತ್ತಿ ಬಟ್ಟೆಗೊಡೆ,
ಶಿಶುವ ಬಿಟ್ಟ ಗೊಲ್ಲನೆಡೆ.

ಮಾಯೆ ಹರಿಯೆ. ಬಾಲನಳೆ,
ಗೋಪಿ ಹರುಷ ಕೋಡಿಗೊಳೆ,
ನಂದಗೋಪ ನೋಡಿ ನೋಡಿ ಸುತನ ಮುದ್ದ ಸೂರೆಗೊಳೆ,
ಅಂದು ಎಲ್ಲ ಗೋಕುಲ
ಹರುಷಕಾಯ್ತು ಡೇಗುಲ

ಇಂತು ಗೊಲ್ಲನಾಗಿ ಹರಿ,
ಕೊಳಲು ಕರದಿ, ನವಿಲುಗರಿ
ಶಿಖೆಯೊಳೆಸೆಯೆ, ಬೃಂದವನದೊಳಾಡಿ ಗೋವ ಕಾದ ಪರಿ
ಜಗಕೆ ರಮ್ಯವಾದುದು,
ಇಂದೂ ಮೋದವೀವುದು !

ಕುಳಿರ್ವ ವನದಿ ಸೇರುವ
ಜೊನ್ನ ಕೂಟ, ಕುಣಿತವ,
ಕೊಳಲು ಕರೆವ ಮೋಹದಿಂಪಿಗೊಲಿದು ತುಡಿವ ಹೃದಯವ
ನೆನೆಯಲೆಷ್ಟು ಮೋದವು !
ಆಹಾ ! ಏನು ಮೋದವು !

ಕಾಳಿಮಡುವು, ರಾಸದೆಡೆ,
ಸುಖದಿ ಮೇವ ಗೋಗಳೆಡೆ,
ತಳಿತ ಹೂತ ವನದೊಳಾಡಿ ಬುತ್ತಿಮೆಲುವ ಗೊಲ್ಲಪಡೆ,—
ಇಂದು ಬರಿಯ ನೆನಪದು :
ಕವಿಯು ಕಾಂಬ ಕನಸದು !

* * *

ಸೋನೆ ತಿರೆಯ ತೊಯ್ಯುತಿರೆ,
ಮಿಂಚೆ ತಿಮಿರ ನಡುಗುತಿರೆ,
ಗೂಡ ಗೊಲ್ಲ ಜೀವಗೊಂಡು ಹಿಂದನಿಂತು ಮನಕೆ ತರೆ,
ಮುದವು ಮೊಳೆತು ನವೆವುದು,
ಸುಯ್ಯಲೊಂದ ತರುವುದು—
ಇಂದು ನಮ್ಮ ಬಾಳು ಗೋಳು, ಬಯಲು, ಹುಸಿಯು ಎನಿಪುದು.

——

# ಕಂಬನಿ

ಚೈತ್ರಮಾಸದೊಂದು ರಾತ್ರಿ—
ಬಾನ ಬಟ್ಟಲನ್ನು ತುಂಬಿ
ಸೂಸುತಿತ್ತು ಜೊನ್ನಜೇನು ;
ಮುಗಿಲು ಹೊನಲ ತೀರವೊಂದ
ರಚಿಸುತಿದ್ದಿತು.

ಇರುಳ ಚೆಲುವು ಕರೆಯಿತೆನ್ನ
ಹೊರಗೆ.—ಹಿಂದೆ ಹಾಡ ಕೇಳಿ
ಮುಗ್ಧನಾದುದನ್ನು ನೆನೆದು
ಹೊರಟೆನೊಂದು ಮನೆಯ ಕಡೆಗೆ,
ಆಸೆ ತುಡಿಯಲು.

ಅಲ್ಲಿ ಕೇಳ್ದುದೇನ ನಾನು ?
ಅಲ್ಲಿ ಕಂಡುದೇನ ನಾನು ?
ವಾದ್ಯವನ್ನೆ, ಗೀತವನ್ನೆ ?—
ಮೃತ್ಯು ಹೊಕ್ಕ ಮನೆಯ ಗೋಳ !
ಆರ್ತನಾದವ !

"ಅಯ್ಯೊ, ಅಳಿದೆಯೇನೊ ಮಗುವೆ,
ನಮ್ಮ ಮುಪ್ಪಿನೂರೆಗೋಲೆ ! "
"ಇನ್ನು ನಮಗೆ ತ್ರಾತರಾರು,
ಸುಖಕೆ ಕಷ್ಟಕಾಗುವವರು
ನೀನು ತೀರಲು ! "

" ಇಂಥ ಕೆಳೆಯನೆಲ್ಲಿ ದೊರೆವ ! "
" ಎಂಥ ದಣಿಯು, ಏನು ಘೃಣಿಯು " —
ಎಂದು ಹಂಬಲಿಸುತಲಿತ್ತು
ಪುತ್ರಮಿತ್ರ ಬಂಧು ಜನವು
ಶವದ ಮುಂಗಡೆ.

ಶವವ ಕಂಡೆ : ಮರುಗಲಿಲ್ಲ.—
"ಸಾವು ಸಹಜವೆಲ್ಲ ಜನಕೆ.
ಹುಟ್ಟನಂತೆ ಸಾವು ಬೇಕು
ಜಗದ ಮೇಲ್ಮೆಗೆಂ"ದುಕೊಂಡೆ
ಸ್ಥಿರದ ಮನದೊಳು.

ಆದರವನ ಬಂಧುಜನದ
ಎಂದು ಕೇಳದಂಥ ಗೋಳು—
ಅವನ ಒಲುಮೆ, ಮಮತೆ, ಮರುಕ
ಇನ್ನು ಕಾಣೆವೆಂಬ ಗೋಳು
ಎದೆಯ ಬಿರಿಸಿತು.

ಮೃತ್ಯುವವನ ಜೀವವೊಯ್ದು
ಹಿಂದೆ ಉಳಿಸಿತೊಂದು ಆರಕೆ—
ಯಾರು ತುಂಬದಂಥ ಆರಕೆ !
ಎಲ್ಲ ವ್ಯರ್ಥ : ಕಣ್ಣನೀರು,
ಮರುಕ, ಸುಯ್ಯಲು !

ಚೈತ್ರಮಾಸದಿರುಳೊಳಂದು,—
ಕಂಪು, ಗಾಳಿ, ಜೊನ್ನ, ಒಂದು-
ಗೂಡಿ ಸ್ವರ್ಗ ರಚಿಸಿದಂದು—
ಮನದೊಳೊಯ್ದನವರ ದೈನ್ಯ-
ದಾರ್ತನಾದವ.

ಅಂದು ಮನವು ಕಣ್ಣನೀರ
ಮೂಲ ಹುಡುಕಿ ತೋರಿತಲ್ಲಿ
ಕಂಡೆನಿವನು : ಕಳೆದ ಬಾಳ
ನೆಳಲ್ಗಳೊಡನೆ ಬೆರೆದ ನೆನಪ,
ಒಂಟಿತನವನು.

ಮೃತನು ಅಷ್ಟು ಜೀವಿಸಿರದೆ,
ಜೀವಿಸಿರುವರೊಬ್ಬಗೊಬ್ಬ-
ರಷ್ಟು ಸಾಯದಂತೆ ಇರಲು—
ಎಷ್ಟು ಮಿಗುತಲಿತ್ತು ಜಗದಿ
ಗೋಳು, ಕಂಬನಿ!

# ಕಣಿವೆಯ ಮುದುಕ

ಪಯಣ ಬೆಳಸಿತು ಸಂಜೆ; ಬಾನು
ಭಯವ ಬೀರಿತು ಮಿಂಚಿ ಮೊಳಗಿ;
ಬಯಲುದಿಣ್ಣೆಯನೊಂದುಮಾಡಿತು
ಕಣಿವೆ ತುಂಬುತ ಕತ್ತಲು.

ಕಾಡಿನೊಳಗೆ ನಾನೆ ಒಂಟಿ;
ಓಡುತಿದ್ದೆನು ಹನಿಗೆ ಬೆದರಿ,
ಮೋಡ ಮಿಂಚಲು ಹಾದಿ ಹಿಡಿದು
ಮೆಟ್ಟಲೇರುವ ತಾಣಕೆ.

ಏನನೆಡಹಿದೆ? ಸುಯ್ಯಲೇನು?
ಏನು ನರಳಿಕೆ?—ಮನುಜನೇನು!
"ಕಾಣದೇನೋ ದಾರಿಹೋಕನೆ!"
ಎರದು ಗದರಿತು ವ್ಯಕ್ತಿಯು.

ಹೆದರಿ ನಿಂತೆನು—ಮಿಂಚು ಬೆಳಕೊಳು
ಮುದುಕನೊಬ್ಬನ ಕಂಡೆನಲ್ಲಿ:
ಬದಿಯ ಬಂಡೆಯನೊರಗಿ ಕುಳಿತ
ಹೊಸಿಲಸಾವಿನ ಮುದುಕನ.

"ಗೌಡ, ಕ್ಷಮಿಸೈ; ಇರುಳು, ಕಾಣದು,
ಮೋಡ ಮುಸುಕಿದೆ—ಕಾಡಿಗೊಬ್ಬನೆ!
ಮೇಡ ಹತ್ತಲು ಕಷ್ಟವಹುದೈ;
ಜೊತೆಗೆ ನಿಲ್ಲುವೆ"ನೆಂದನು.

ಮೊದಲು ಕೋಪಿಸಿ, ಬಳಿಕ ನಕ್ಕನು
ಮುದುಕ ಮರುಕುವ ಹಳಿವ ನಗೆಯು—
"ಮುದಿಗೆ ಚಳಿಯೆ, ಇರುಳೆ, ಮಳೆಯೆ,
ಕಾಡೆ, ಮೇಡೆ? ನಡೆಯೊ ನೀ."

ಹಳುವಿನೊಳಗೂ ಮರುಕ ಬೇಡವೆ!
ಇಳಿಯು ಬವಣೆಗೆ ಜಡ್ಡು ಬಿದ್ದನೆ?
ಕಳೆದ ಬಾಳೊಳು ದಯೆಯ ಕಾಣದೆ
ಇಂದು ಕಾಣಲು ಹಳಿವನೆ?

ಹಿತದ ಮಾತುಗಳಾಡುತಾತನ
ಖತಿಯನಿಳುಹಿದೆ; ಬೇಡವೆಂದರು
ಜೊತೆಯೊಳೊಯ್ದೆನು ಹೆಜ್ಜೆಹೆಜ್ಜೆಗು
ನಿಂತು ಮುದುಕನ ನಡೆಸುತ.

ಮೋಡಹತ್ತುತಲಿದ್ದೆವಿಂತು—
ಗೌಡ ಕರಗಿದ, ಕರವ ನೆಮ್ಮಿದ.
ಮೋಡ ಮಿಂಚಿನ ಬಾನ ಹೋಲಿತು
ಎನ್ನ ಮನದಾ ಭಾವವು.

ಗಗನವಳೆಯುವ ಮಿಂಚು ಮುದುಕನ
ಮೊಗದಿ ಬಿಂಬಿಸಿತಂದು—ಕಂಡೆನು
ಉಗುವ ಕಂಬನಿ ಹೊನಲ. ಸೋಜಿಗ!
ಅಳುವನೇಸೀ ಮುದುಕನು!

“ದುಗುಡವೇತಕೆ, ಗೌಡ? ಪೇಳ್ಕೆ
ದಿಗಿಲು ಬಿದ್ದೆಯ? ಮುಪ್ಪ ಹಳಿವೆಯ?
ಬಗೆಯೊಳಾವುದು ನೋವು? ಕೋಪವೆ?
ನಿನ್ನ ಅಬಲತೆಗಳುವೆಯಾ?”

ಎನ್ನ ಮಾತಿಗೆ ಗೌಡನೆಂದನು,
ಎನ್ನ ಕರಗಳನಮುಕಿ, ಮೆಲ್ಲನೆ;
“ನಿನ್ನ ಈ ಬಗೆ ಮರುಕ ತಂದಿತು
ಮರೆತ ಕಂದನ ನೆನಪನು.”—

ನಡೆದೆವಿಬ್ಬರು ಮೌನದಿಂದ
ಅಡವಿಯೊಳಗೆ ನಾನು ಮುದುಕನು.
ನುಡಿಯು ತಿಳುಹಲು ಬಲ್ಲುದೇನು
ಮೌನ ನುಡಿದಾ ದುಗುಡವ?

# ಕಮಲೆ

ಚೆಲುವ ನೋಡಿ ಮುಕುರದೊಳಗೆ
ನಲಿದು ಹೆರಳ ಹೆಣದಳಬಲೆ ;
ಕಳೆದು ಕಟ್ಟೆ ದುಂಬಿಗುರುಳು
ಕಣ್ಣ ಮುಸುಕಿ ಕುಣಿಯೆ, ಮುಳಿದು ತಿರುಗಿ ತಿದ್ದುತ.

ತಳಿರುಗೆಂಪ ತುಟಿಯು ಕಚ್ಚಿ
ಬಿಳುಪು ಕೆಂಪ ಬೆರಸಲದಕೆ
ತಳಿರ ಮುಗುಳ ಮುತ್ತು ಸಮನೆ ?
ಬೆರಗುತರುವ ಬೆಡಗಿನೆಡೆಯು ಕಮಲೆ ಕೋಮಲೆ.

ಆವಳ ಬೆಡಗ ನೋಡಿ ತಣಿಯ-
ಳವಳ ರೂಪಿಗವಳೆ ಮರುಳು.—
ರವಿಯ ಹೊನ್ನ ತೆರೆಯು ನುಸಿದು
ಮೊಗದ ಹೊನ್ನ ಬೆಳಗಿದುದನು ಕಮಲೆ ಅರಿಯಳು.

ಮೆಲನೆ ಜಾರಿತವಳ ಮನವು—
ಎಲರು ಹೊನಲ ಹಾಡನೊಯ್ದು
ಮಲರ ಕಂಪ ಕದ್ದು ಸುಳಿವ,
ಕೊರಳಿನಿಂಪ ತೋರಿ ಹಕ್ಕಿ ನಲಿವ, ಹಳುವಿಗೆ :

"ತರುಣಿಯಿಳಿದನಿನ್ನು ನಡೆವ"—
ತರುಣ ಬಿಡನು. ಕೊರಳ ಬಳಸಿ
ಕರವನವಳ ಮೆಲ್ಲನದುಮು-
ತೊಲುಮೆ ಮಾತನುಲಿಯಲೆಂತು ಕಮಲೆ ನಡೆವಳು !

“ಹಗಲು ಜಾರಿತರೆಯ ಮರೆಯೊ-
ಳಗಲಲಾರೆ ನಿನ್ನ ಕಮಲೆ.
ಹಗಲು ಜಾರಿತಾದೊಡೇನು ?
ನಿನ್ನ ಕಣ್ಣೊಳೊಲುಮೆ ಬೆಳಕು ಹೊಳೆಯೆ, ಕತ್ತಲೆ ?

“ಗರುಕೆ ಕೆಂಪಿನೊಸಗೆ ಮುಗಿಯೆ,
ಎರೆಯುತೊಲವ ದಣಿದು ಹಕ್ಕಿ
ಕೊರಳ ಬಿಗಿದೊಡೇನೆ, ಕಮಲ ?
ನಿನ್ನನೊಲಿಸಿ ದಣಿವೆನೇನೆ, ನಿನ್ನ ಮುದ್ದಿಸಿ ?

“ಸೇರಿತಲರ ಮುಸುಕದುಂಬಿ ;
ಹಾರಿ ಹೆಣ್ಣ ಹಿಂದೆ ಹಕ್ಕಿ
ಸೇರಿತದಿಗೊ, ಬಳ್ಳಿ ಮನೆಯ ;
ಒಲುಮೆಗೂಡ ಸೇರದೊಡೆವ ಸಮಯವೀಗಲೆ ?

“ಇತ್ತಲಲ್ಲಿ ಹೊರಳಿ ಹೊನಲು
ಸುತ್ತಿ ಬಳುಕಿ ಜಾರುವಲ್ಲಿ
ಮುತ್ತನೊಂದ ಮೆಲ್ಲನೊತ್ತಿ
ಜಿಂಕೆಗಣ್ಣ ಭಯವನೊರಸಿ ಹೊಳಪುಗೊಡುವೆನು.

“ಮುಗಿಲ ಮರೆಯೊಳವಿತು, ನಾಚಿ
ನಗುವ ತಾರೆ ಹೊಳಪ ಜರೆವ
ಅಗಲಗಣ್ಣ ಚೆಲುವ ಹೀರಿ
ಕ್ಷಣವದೊಂದರಲ್ಲಿ ಯುಗದ ಸುಖವ ತುಂಬುವೆ.”

ಎನುತ ತರುಣನವಳನೊಯ್ದು
ಹೊನಲು ಜಾರುವೆಡೆಯ ಸೇರಿ—
ಕನಸು ಹರಿದುದಾಗ ;—ಕಮಲೆ
ಸವಿದ ಸುಖವು ತೀರಸವಿಯು ಕನಸಿಗಾದರೂ.

ಬೆರಗ ತರುವ ಬೆಡಗ ನೋಡಿ
ತರುಣಿ ನೋವಿನುಸಿರ ಬಿಟ್ಟ-
ಳರುಣಕಿರಣವಾರೆ ಮುಗಿಲ
ಚೆಲುವು ಮಾಸುವಂತೆ ಮೊಗದ ಕೆಂಪು ಮಾಸಿತು.

ಒಲುಮೆ ಗುಟ್ಟನರಿಯದಂದು
ಒಲುಮೆ ಗುಟ್ಟನೆಲ್ಲ ಬಿಚ್ಚು-
ತೊಲುಮೆಯೆರೆದ ತರುಣನೆಲ್ಲಿ ?
ಒಲುಮೆ ಮಾತನುಲಿವರಾರು ಇಂದು ಕಮಲೆಗೆ ?

ಬಿರಿಯುದಾಗ ಮುಗುಳ ಸುತ್ತಿ
ಮೊರೆದು ಹಗಲ ಕಳೆದ ದುಂಬಿ,
ಬಿರಿದು ಮುಗುಳು ಕಂಪನೆರಚೆ
ಒಲುಮೆ ಬಯಸೆ, ಹಾರಿತೆಲ್ಲಿ, ಒಲುಮೆಯೆರೆಯದೆ ?

ಇದ್ದರೇನು ತಂದೆ ತಾಯಿ,
ಇದ್ದರೇನು ಅಣ್ಣನೊಲುಮೆ
ಮುದ್ದು ರಮಣನೊಲುಮೆಯಾಯೆ
ಅವಕೆ ಉಂಟೆ ? ಶಶಿಯ ತಂಪು ತಾರೆಗಡಣಕೆ ?

## ಹಣತೆ

ಕಳೆದ ಸುಖದ ದಿನಗಳೊಂದೆ
ಗಳಿಗೆಗೀಗದೇನ ಕೊಡಳು !
ಒಲುಮೆಯುಳಿಯಲವಳ ಚೆಲುವಿ-
ಗವಳ ಬಾಳಿಗರ್ಥವುಂಟೆ ? ಕಮಲೆ ಅತ್ತಳು.

ಬೆರಗು ತರುವ ಬೆಡಗ ಕಾಣು-
ತುರಿಯು ಹೆಚ್ಚಿತೊಡಲ, ಕಮಲೆ
ಹೆರಳ ಕೆದರಿ ಸುಯ್ದುಳಳುತ—
ಕಿವುಡನಲ್ಲದಿರಲು ವಿಧಿಯು ಕರಗದಿರುವನೆ ?

ನೆನೆದಳಂದು ರಮಣನೊಲವ,
ನೆನೆದಳವನ ಮೊಗದ ಸಿರಿಯ,
ಕನಸಿನಂತೆ ಮಾಯವಾದ,
ಕನಸಿಗಿಂತ ಸವಿಯ, ಹೊಳೆಯ ಕರೆಯ ಸಂಜೆಯ.

ಇರುಳು ತನುವ ಮರೆಸೆ, ಮುದವು
ಮೀರಿ ಮಾತು ಬಿಗಿಯೆ, ಜೀವ-
ವೆರಡು ಸೆರೆಯನೊಡೆದು, ಭಾವ-
ವಳಿದು ಬೆರೆಯುತಿರುಳ ಕಳೆದ ಸುಖದ ಸವಿಯನು.

ಹಳೆಯ ಕನಸೊಳೆಷ್ಟು ಸವಿಯು ;
ಕಳೆದ ಸುಖವು "ಕನಸು" ಎನುತ
ತಿಳಿಯಲೆಷ್ಟು ನೋವು ! ಸುಖದ
ನೆನಪಿನೊಡಲ ಬೇಗೆ ತಾಳದಬಲೆ ಅತ್ತಳು :

“ಕೊರೆಯುವಂತೆ ಕಣ್ಣ ಬೆಳಕು
ಹರಿದು, ಥಟ್ಟನಳಿದು, ಹೆಚ್ಚಿ-
ನಿರುಳ ತೋರಲೇಕೆ ? ಪ್ರೇಮ-
ವಷ್ಟನೆರೆದನೇಕೆ, ತೊಟ್ಟನರಕೆ ಮಾಡದೆ ? ”

*    *    *

ಅವಳ ಕೊರಗಿಗತ್ತೆ ನಾನು
ಆವಳ ನುಡಿಯ ಹೊಳಲು ಎನ್ನೊ-
ಳವಿತು ನುಡಿವುದೊಮ್ಮೆಗೊಮ್ಮೆ:
“ಪ್ರೇಮವಷ್ಟನೆರೆವರೇಕೆ ? ಅಷ್ಟನೇತಕೆ ? ”

———

# ಏತಕೆ ?

ಪಡುವ ಬಾನಿನ ಹಬ್ಬ ಮುಗಿಯಲು
　　ನಡೆದೆ ಕಣಿವೆಯನಗಲುತ ;
ತೊರೆಯ ಮಂಜುಳಗೀತ ನವೆದುದು,
　　ಉರುಳಿ ಮೆಲ್ಲನೆ ಕಿವಿಯೊಳು.

ಮನಕೆ ತಟ್ಟಿತು ಒಂದು "ಏತಕೆ"—
　　ನಾನದರಿಯೆನು ಏತಕೊ ?
ಬೆರೆವುದೇತಕೆ, ನಲಿವುದೇತಕೆ,
　　ಬೆರೆದೊಡಗಲುವುದೇತಕೆ ?

ನೂರು ಚಿತ್ರವನಂದು ನೆನೆದನು
　　ಸೇರುವಗಲುವ ಆಟದ :
ಮುನ್ನ ಹರುಷದ ಹೊಳಪ ಸೂಸಿದ
　　ಕಣ್ಣ ಕಂಬನಿ ತುಂಬನು ;

ಕೊರಳನಪ್ಪುತ ತರುಣರುಲಿದಾ
　　ಸರಸದೊಲುಮೆಯ ಮಾತನು,
ಮಾತನುಳಿದು ಪ್ರಣಯಿ ಸುಯ್ಯುವ
　　ಕಾತರದ ಬಿಸಿಯುಸಿರನು ;

ತೊದಲು ಮಾತಿಗೆ, ತಪ್ಪು ನಡಿಗೆಗೆ
　　ಮುದದಿ ಹಿಗ್ಗಿದ ಮನುಜರ,
ಬಂದ ಹಾಗೆಯೆ ಮಾಯವಾಗಲು
　　ಕಂದ, ಕಂಬನಿ ಕರೆವರ.

—ನೂರು ಚಿತ್ರವನಿಂತು ನೆನೆದನು
ಸೇರುವಗಲುವ ಆಟದ ;
ಹಿಂದೆ ನಮ್ಮೆದೆ ಬೆಳಕು ಮಸಣದಿ
ನಂದಿಹೋದಾ ತೆರವನು.

ಅಂದು ಪಡುವಣ ಕಮರಿಗುರುಳಲು
ಚಂದ್ರನಳುಕಿದ ನಿಶಿಯೊಳು,
ಕಣ್ಣಸೀರಿನ ಹೊಲನ ಹರಿಸಿ
ಮಣ್ಣೊಳಗೆದೆವು ಕುಳಿಯನು.

ತೂಗುತೊಟ್ಟಿಲ, ಹಿತದ ಮುತ್ತೆಯ
ಜೋಗುಳದ ಹಂಗಿಲ್ಲದೆ
ಕಣ್ಣಮುಚ್ಚಿದ ಹಸುಳೆಗಂದು
ಮಣ್ಣ ಕುಳಿಯೇ ತೊಟ್ಟಿಲು.

ಏಕೆ ಬಂದನೊ, ಎಲ್ಲಿ ಪೋದನೊ,
“ಏಕೆ” ಎಂಬುದನರಿವೆವೆ
ಹೆರನ ತೆರದೊಳು ಬಂದು ನಮ್ಮೆದೆ
ಸೆರೆಯ ಹಿಡಿದಾ ಮಾಯೆಯ ?

ಎಷ್ಟು ಪ್ರೇಮವನವನಿಗೆರೆದೆವು,
ಎಷ್ಟು ಮೋಹದಿ ಮುದ್ದಿಸಿ!
ಚಿನ್ನ ನಮ್ಮವನೆಂಬ ಹೆಮ್ಮೆಯು
ಮಣ್ಣುಗೂಡಿತು ಕ್ಷಣದೊಳು.

## ಹಣತೆ

ಕೊನೆಯ ದಿನಗಳ ನರಳಿ ಕಳೆದನು—
ನೆನೆವೆನೆಂತಾ ದಿನಗಳ ?
ಚಿನ್ನನೆನ್ನಾ ಕನಸ ನಂದಿಸಿ
ಕಣ್ಣಮುಚ್ಚಿದ ದಿನಗಳ ?—

ಅವನ ಚಂದ್ರನ ಜರೆವ ಮೊಗದೊಳು
ನೋವು ಕೊರೆಯಿತು ಸುಕ್ಕನು.
ಸೊಗಸು ಕನಸನು ನಿದ್ದೆ ತಾರದು ;
ನಗೆಯು ಬತ್ತಿತು ಮೊಗದೊಳು.

ಕೊನೆಗೆ ಕಂದನ ಕಣ್ಣ ಮುಚ್ಚಿತು
ಕನಸ ತೋರದ ನಿದ್ದೆಯು.
ಮುಗಿಯಿತಂದಿಗೆ ಹಾದಿಕಾರನ
ಜಗದ ಜನ್ಮದ ಯಾತ್ರೆಯು.

ಕಳೆದ ಜನ್ಮದ ಪಾಪಶೇಷವ
ಕಳೆಯೆ ಹುಟ್ಟನು ಪಡೆದನೊ ?
ನೊಂದು ತನುವನು ತೆತ್ತನೇನೋ
ಕುಂದ ಕಳೆಯಲು ಪಿತರದ ?

ತಾರೆಯರಳುವ ಸುಖದ ನೆಲೆಯೊಳು
ಸೇರಿ ಮೆರೆವನೊ ದಿವದೊಳು ?
ಒಲುಮೆ ಬಳ್ಳಿಯ ಹಣ್ಣಿನಂದದಿ
ಚೆಲುವೆಯೊಡಲೊಳು ಬೆಳೆವನೊ ?

ಸಾವು ಸೋಕಲು ಎಲ್ಲವಳಿದುದೊ ?
ಜೀವನುಳಿದನೊ ನಂದದೆ,
ತಿರುಗಿ ಜನ್ಮದ ಬಲೆಗೆ ಸಿಲುಕುತ
ನರಳಿ ನಲಿಯಲು ಭವದೊಳು ?

ಅಂದು ಮಸಣದಿ ಬಿಟ್ಟುಬಂದೆವು
ಕಂದನನ್ನಾ ಕುಳಿಯೊಳು,
ಚಿನ್ನದಂತಹ ನಮ್ಮ ಮುದ್ದನ
ಮಣ್ಣುಹುಳುಗಳ ತುತ್ತಿಗೆ.

ಕಂದಿ ಸೊರಗುತ ಬಿದ್ದ ಹೂವಿನ
ಗಂಧದಂದದಿ ಕಂದನ
ನಂದದುಳಿದುದು ನಮಗದೊಂದೇ—
ಮಂದಹಾಸದ ಮುಗ್ಧತೆ !

*   *   *

ಕನಸ ನೆನೆಯುತ ದಾರಿ ಕಳೆದೆನು,
ಮನದೊಳುಳಿಯಿತು "ಏತಕೆ"—
ಬೆರವುದೇತಕೆ ? ನಲಿವುದೇತಕೆ ?
ಬೆರೆದೊಡಗಲುವುದೇತಕೆ ?

———

# ಹುಚ್ಚಿ

೧

ನೋಡು, ಕೆಳೆಯ, ಮಾನಹೀನೆ
ದೀನೆ ಹುಚ್ಚಿಯ—
ಕಾಡುತಿರುವ ಹುಡುಗ ಪಡೆಯ
ನಕ್ಕು ಬೈದು ತಡೆವಳ.

ಕೈಯ ಡಬ್ಬ, ಮುಡಿಯ ಹೂವು,
ಉಟ್ಟ ಚಿಂದಿಯು,
ಮೈಯ ಧೂಳು, ಎಲ್ಲೊ ಎಲ್ಲೊ
ಅಲೆವ ದಿಟ್ಟಿಯು.

ಎಂದೊ ನೆಟ್ಟ ನೋವ, ಎಂದೊ
ನಕ್ಕ ನಗೆಯನು
ಇಂದು ನೆನೆವ ಗೋಳು, ಹಾಸ—
ನೋಡದೋ, ಹುಚ್ಚಿಯು !

೨

ಬಾಲರೋಳಿ ಚೆದರಿತೆಮ್ಮ
ಭಯಕೆ.—ಹುಚ್ಚಿಯು !
ಕಾಲನೆತ್ತಿ, ಕೇಕೆಹಾಕಿ,
ಕುಣಿದಳೆಮ್ಮ ಸುತ್ತಲು.

"ಕಣ್ಣನೀರಿದೇಕೆ, ಕೆಳೆಯ,
ಹುಚ್ಚಿಗೇಕೆ ನಾಣ್ಯವು ?"—
"ಎನ್ನವರಿಗೂ ಇಂಥ ಮರುಕ
ದೊರೆಯಲೆಂದು ನೇಹಿಗ!"

# ಒಲುಮೆಹೊನಲ ತಡೆಗಳು

ಒಲುಮೆಹೊನಲಿಗಣೆಗಳೆಷ್ಟು—
ಹರಿಯಬಿಡದ ತಡೆಗಳು !
ಹೊನಲ ತಡೆವುವೇನು ಹಿತದಿ !
ಆದರೇನು ?—ತಡೆಗಳು !

ತಾಯಿ, ತಂದೆ, ಅಣ್ಣ, ತಮ್ಮ,
ಕೆಳೆಯ, ಸುತರು, ಪುತ್ರಿಯು,
ಬಾಳಿನರಕೆ ಪೂರ್ಣಗೈವ
ಸತಿಯು ಎಂಬ ತಡೆಗಳು !

ಜ್ವರದ ಬೇಗೆ ತಾಳದಂದು
ರೋಗಿ ನರಳಿ ಸುಯ್ವನು,
ಗಂಟಲೊಣಗಿ ದಾಹ ಹೆಚ್ಚೆ
ಹಣ್ಣನೊಂದ ಬಯಸುತ.

ಅಂದು ಮಡಿಲೊಳಿತ್ತು ಹಣ್ಣು
ಅರಸ ಮೆಚ್ಚುವಂಥದು,
ಅವನ ಬಯಕೆ ರೂಪುಗೊಂಡು
ಎನ್ನೊಳವಿತ ತೆರದೊಳು.

''ಎಂಥ ಮಗನು ! ಪ್ರೇಮ ಪ್ರತಿಮೆ ! ''
ಎಂದು ನಲಿವ ತಾಯನು
ನೆನೆದು, ಕೇಳಿದಷ್ಟು ಬೆಲೆಯ
ಕೊಟ್ಟು ಕೊಂಡ ಸೇಬದು.

ರೋಗಿಯುರಿಯ ಹಣ್ಣಿನಿರವ ;
ನರಳಿ ಸುಯ್ದು ಬಯಸುತ.
ಅವನ ಸಹಿಸದಳಲ ಕಂಡು
ತುಡಿದುದೆನ್ನ ಹೃದಯವು.

ಮಡಿಲೊಳಿಟ್ಟೆ ಕೈಯ—ತಾಯ
ನೆನಪು ತಡೆದುದೆನ್ನನು :
ಪ್ರೇಮ ತುಂಬಿ ಕಣ್ಣೊಳವಳು
ಹರಸಿ ನಲಿವ ಚಿತ್ರವು.

"ವರುಷಕೊಮ್ಮೆ ನೋಡಹೋಗಿ
ಬರಿಯ ಕೈಯ ತೋರಲೆ ?
ಎಂಥ ಹಣ್ಣು ! ಹಿಗ್ಗುತೆಷ್ಟು
ಸವಿವಳೆನ್ನ ತಾಯಿಯು !"

ಕೈಯ ತೆಗೆದೆ, ಕಿವಿಯೊಳಿರಿಯಿ-
ತವನ ಕೂಗು ಬೇಗೆಯ :
ತಿರುಗಿ ಕೈಯ ಮಡಿಲೊಳಿಟ್ಟೆ ;
ತಿರುಗಿ ತೆಗೆದೆ—ಬರಿದನು !

ಇಂತು ಭಾವವೆರಡು ತುಮುಲ-
ವೆದ್ದುವೆನ್ನ ಮನದೊಳು :
"ತಾಯನೊಲಿಸಲೇನು ?—ರೋಗಿ-
ಗಿತ್ತು ಬೇಗೆಯಳಿಸಲೆ ?"

## ಹಣತೆ

ಹಣ್ಣ ತಿಂದು ತಾಯಿ ಪಡೆವ
    ಹಿತವ ಬಲ್ಲೆ—ಎನ್ನದು.
ರೋಗಿ ಸವಿದು, ಬೇಗೆಯಡೆಗೆ
    ಪಡುವ ಹಿತವ ಬಲ್ಲೆನೆ!

ದ್ರಾಕ್ಷಿಯನ್ನೊ ಕಿತ್ತಿಳೆಯನೊ
    ರೋಗಿಗೀಯೊ’’ ಎನ್ನುತ
ಆಳಿಗೆಸೆದೆ ಮೂರು ದುಡ್ಡ :
    ಮಡಿಲ ಹಣ್ಣ ಮರೆಸಿದೆ.

ಅಂದಿನಿರುಳು ಊರ ಸೇರಿ
    ಕಂಡನೆನ್ನ ತಾಯನು.
ಹಣ್ಣನೀಯೆ ಕಂಗಳರಳಿ
    ನಗೆಯ ಸೂಸೆ, ನಲಿದೆನು.

ಹಣ್ಣ ತಿಂದೆವಿಬ್ಬರಂದು—
    ಅರಸ ಮೆಚ್ಚುವಂಥದ.
ರೋಗಿಗೀಯಗೊಡದ ಮೋಹ
    ಮಾಯವಾಯ್ತು ಕ್ಷಣದೊಳು.

ಶಯನವೇರಿ ಕುಳಿತೆ—ಮನಕೆ
    ಮರಳಿತಂದಿನನುಭವ.
ಹಣ್ಣ ಸವಿಯೆ ಹೆಚ್ಚು ಹಕ್ಕು
    ರೋಗಿಗಿತ್ತು ಎನಿಸಿತು.

ಅವ್ಮ ಪ್ರೇಮವೆರೆಯುತೆನ್ನ
ಬಾಳಿಗರ್ಘವೀವಳು.
ಅವಳ ಸುಖವ ಸವಿಯ ಬಲ್ಲೆ,
ಅಳಲನೆನ್ನದೆಂಬೆನು.

ಆದರಿಂದು ತಡೆದುದೆನ್ನ-
ನವಳ ಪ್ರೇಮಮೋಹವು—
''ಅವನ ಹಕ್ಕ ಕದ್ದೆನೆ''ಂಬ
ಭಾವವಿರಿಯಿತೆನ್ನನು.

ಇಂಥ ಪ್ರೇಮಮೋಹ ಹರಿಯೆ
ಮಮತೆ ಕಟ್ಟೆ ಚಿಗಿಯಲು,
ಎಷ್ಟು ಸುಲಭವಾಗುತಿತ್ತು,
ರೋಗಿಯುಳಲು ನನ್ನದು!

ಒಲುಮೆಹೊನಲಿಗಣೆಗಳೆಷ್ಟು—
ಹರಿಯುಬಿಡ[illegible]
ಹೊನಲ ತಡೆವುವೆಷ್ಟು
ಆದರೇನು?—ತಡೆಗ[illegible]ು!

# ಪತಿತಪಾವನ

ನಮ್ಮ ಕೊಳೆಯನೆಲ್ಲ ತೊಳೆದು,
ದಿವದ ಬಾಗಿಲನ್ನು ತೆರೆದು,
ಜನ್ಮರಹಿತವಾದ ಗತಿಯ
ಕೊಡುವನೀತನು—
ಎನ್ನುತಾರ ನಂಬಿ ಭವದ
ಕಡಲೊಳಿದ್ದು ನಲಿಯುತಿಹರೊ
ಗುರುವಿಸಂದು ಪುಣ್ಯದಿನವು,
ಗುಡಿಯೊಳುತ್ಸವ.

ಒಳ್ಳೆಯುಡಿಗೆ ತೊಡಿಗೆ ತೊಟ್ಟು,
ಹಣೆಗೆ ಕೆಂಪು ತಿಲಕವಿಟ್ಟು,
ನೆನೆದ ತುರುಬನಿಳಿಯಬಿಟ್ಟು,
ನಾರಿಗಡಣವು
ಬಂದು. ಅವರ
ಮೊಗದ ಮಂದಹಾಸದೊಡನೆ
ಒಂದು ಬಗೆಯ ಉಚ್ಚಭಾವ
ಬೆರೆದು ಇದ್ದಿತು.

ಅವರೊಳೊಂದು ಮೊಗದ ಮೇಲೆ
ಐದೆತನದ ಸಿರಿಯು ಇಲ್ಲ,
ಹೊಮ್ಮುತುರುಬು ಭುಜದ ಮೇಲೆ
ಹರಿಯಲಿಲ್ಲವು.

ಎಳೆಯ ಪ್ರಾಯ—ಆದರೇನು ?
ಇರುಳ ಕಣ್ಣನೀರ ಹೊನಲು
ಚೆಲುವ ಕೊಚ್ಚಿ ಕೊರೆದ ಸುಕ್ಕು
ಮುಪ್ಪ ತೋರಿತು.

ಅಳಲ ಹೊರೆಯು ತಾಳಳೇನೊ ?
ವಿಷದ ಗಳಿಗೆಯೊಂದರಲ್ಲಿ
ನಡೆದ ಪಾಪವಿರಿವುದೇನೊ ?
ಯಾರು ಬಲ್ಲರು ?
ದೇವನಿದಿರಿನೊಳಗೆ ನಿಲ್ಲೆ
ತನಗೆ ಹೆಚ್ಚು ಹಕ್ಕು ಎಂದೊ—
ಜನರಿಗೆಲ್ಲ ಮುಂದೆ ತರುಣಿ
ಗುಡಿಗೆ ನಡೆದಳು.

ಗುಡಿಯೊಳಂದು ವೇದಘೋಷ,
ಪತಿತರನ್ನು ಮೇಲಕೆತ್ತಿ
ಮರುಕವೆರೆದು ಸಲಹುವವನ
ನಾಮಕೀರ್ತನೆ ;
ಆಸೆಚಿಗಿದು, ಬಿಂಕವಳಿದು
ತ್ಯಾಗಮಂತ್ರವೊಂದರಿಂದ
ಅಮೃತರಾಗಿ ದಿವದಿ ಮೆರೆವ
ಯತಿಯ ಹೊಗಳಿಕೆ.

ವೇದಘೋಷ ನಿಂತಿತೇಕೆ ?
ತುಡಿಯುವೆದೆಯೊಳಿಲ್ಲ ಜನರು
ಮೌನವಾಂತು ನಿಂತರೇಕೆ
ಇಂದು ಗುಡಿಯೊಳು ?—
ನಾಮದಿಂದ ಮೈಯ ಮುಚ್ಚಿ,
ಹುಲ್ಲ ಬೆರಳಿಗಿಟ್ಟು, ವಿಪ್ರ-
ನೆನಿಸಿದವನ ಕೋಪ ಜನರ
ಬೆರಗು ಮಾಡಿತು.

''ಪತಿತಳಿರುವ ಗುಡಿಯೊಳಿಂದು
ತೀರ್ಥವನ್ನು ತೆಗೆವರುಂಟೆ ?
ಅವಳ ನೆಳಲ ಸೋಂಕಿನಿಂದ
ಅಶುಚಿ ದೇಗುಲ !
ಅವಳ ಮೊದಲು ಹೊರಗೆ ದೂಡಿ ;
ಮಂತ್ರ ಜಪಿಸಿ ನೀರ ಚೆಲ್ಲಿ.
ಇಲ್ಲದಿರಲು ಸಿಲ್ಲೆವಿಲ್ಲಿ ! ''
ಎಂದ ಕೂಗದು.

ಉಸಿರ ಬಿಗಿದು ನಿಂತ ಜನರ
ದೃಷ್ಟಿ ಹೊರಳಿತೊಂದು ಕಡೆಗೆ,
ಬಡವೆ ವಿಧವೆಯೊರಗಿ ನಿಂತ
ಮಸಕು ಮೂಲೆಗೆ.

ಅಲ್ಲಿ ಮುಸುಕ ಮೋರೆಗೆಳೆದು
ಮಾನದಿಂದ ನೆಲಕೆ ಕುಸಿವ
ಅವಳ ಭಾವ ಕಣ್ಣ ನೀರ
ತರುತಲಿದ್ದಿತು.

''ಏಕೆ ಪತಿತಳೆ''ಂದು ಕೆಲರು,
''ಏನೊ ಕಾಣೆವೆ''ಂದು ಕೆಲರು,
''ಕೂಸ ಹಡೆದು ಬಿಸುಟಳೇನೊ''
ಎಂದು ಕೆಲವರು,
''ಅಯ್ಯೊ ಪಾಪ''ವೆಂದು ಕೆಲರು,
ಹೊರಗೆ ದೂಡೆ ಸೊಂಟ ಕಟ್ಟಿ
ನಿಂತು ಕೆಲರು, ಹಳಿಯುತಿದ್ದ-
ರಂದು ಬಡವೆಯ.

ಏನು ಬಲ್ಲರವಳ ಮನದ
ದುಗುಡವನ್ನು ನೆರೆದ ಜನರು ?
ಎಷ್ಟೊ ತಡೆದು, ಹೆಣಗಿ, ಕಡೆಗೆ
ಸೋತುಹೋದುದ ?
ತಮ್ಮ ನೂರು ಕುಂದ ಸಹಿಸಿ
ಮುಕ್ತಿಕೊಡುವನಿದಿರಿನೊಳಗೆ
ತಮ್ಮ ತಂಗಿಯೊಂದು ಕುಂದ
ಸಹಿಸಲರಿತರೆ ?

"ನಾವು ಶುದ್ಧರೆಂದು ಇಲ್ಲಿ
ಎದೆಯ ಮುಟ್ಟಿ ನುಡಿವರಾರು?
ಬಡವೆಯೆಂದು ಹಳಿವಿರೇನೊ
ನಿಮ್ಮ ತಂಗಿಯ ?
ಸಭೆಯೊಳಿಂತು ಹೆಣ್ಣುತನದ
ಮಾನ ಮುರಿಯಲೆಳಸಲುಂಟೆ ?
ಬಿಡಿರಿ—"ಎನ್ನುವವನ ನುಡಿಯು
ಗಾಳಿಯೊಯ್ದಿತು.

ಪೇಳಲೆಂತು ಮುಂದೆ ನಡೆದ
ನೆರೆದ ಜನರ ಕ್ರೂರತನವ—
ಅವಳ ಕಣ್ಣ ನೀರ ಹನಿಸಿ
ಹೊರಗೆ ದೂಡುತ,
ದೇವಗಂದು ದೂರರಾಗಿ
"ಪತಿತರನ್ನು ಸಲಹುವವನೆ"
ಎಂದು ನುಡಿದು ನಲಿವ ಹಕ್ಕ
ಕಳೆದುಕೊಂಡುದ !

—ಸುದ್ದಿಯನ್ನು ಕೇಳಿ ತುಡಿದೆ,
ನಾವು ಯಾರು ದೇವನಿದಿರಿ-
ನೊಳಗೆ ನಿಲ್ಲೆ ಪಾಪಿಗಿರುವ
ಹಕ್ಕ ಕಸಿಯಲು ?

ಶುದ್ಧರೆಂಬ ಹೆಮ್ಮೆ ನಮಗೆ ?
ನಿತ್ಯಶುದ್ಧನಾದ ದೇವ-
ಗಿನಿತು ಹೆಮ್ಮೆಯಿದ್ದರೆಲ್ಲಿ
ನಾವು ನಿಲ್ವೆವು ?

ಅಂದಿನಿಂದ ದೀನೆ ವಿಧವೆ
ಮೋರೆ ತೋರಳೂರ ಜನಕೆ,
ಅವರ ನಲ್ಮೆ ಕೂಟಗಳಲಿ
ಬೆರೆಯಲೊಲ್ಲಳು.
ಹುಲ್ಲುಮನೆಯೆ ಅವಳ ಬೀಡು :
ದಿನವು ದೇವಗೊರೆವ ಮೊರೆಯೆ,
ಕಣ್ಣ ನೀರೆ, ಅಳಲ ಹೊರೆಯ
ಕಳೆವ ಕೆಳೆಯರು.

ಇರುಳು ಬೆಳೆಯೆ, ಮತಿಯ ಕಣ್ಣು
ಎನ್ನ ಬಾಳ ಕುಂದ ತೋರೆ,
ಬಡವೆ ವಿಧವೆಯನ್ನು ನೆನೆವೆ ;
ಮನವು ತುಡಿವುದು—
ಹುಲ್ಲು ಮನೆಯ ಮೂಲೆಯೊಳಗೆ
ಹಣತೆಯೊಂದು ಮಿನುಗುವಲ್ಲಿ
ಅವಳ ಜೊತೆಯೊಳೆನಲು—''ರಾಮ,
ಪತಿತಪಾವನ.''

——

## ವಿಶ್ವಕುಟುಂಬಿಯ ಕಷ್ಟ

ಬೇಸಗೆ ಮಧ್ಯಾಹ್ನ ತಾಪವುಮ್ಮಳಿಸಿತಾ-
ಕಾಶಕೆಲ್ಲಕು ರವಿಯೊಬ್ಬ ;
ಬೀಸುತ ಗೋದುವೆ ಹಿಟ್ಟನ್ನು ನಾಗಿ ಆ-
ಯಾಸದೊಳಿಳಿವಳು ಕಲ್ಲ.

ಬಿಸಿಯುಂಡ ಬವಣೆಗೆ ನೆಲದೊಳು ಹೊರಳಿ ಸಿ-
ಟ್ಟುಸಿರೆಳೆಯುವಳಿನ್ನ ಅಜ್ಜಿ ;
ಅಸುವನ್ನು ನಮಗಾಗಿ ಮಿಾಸಲು ತೆಗೆದಿಟ್ಟ
ಕಸಿಹಣ್ಣು ಹಣ್ಣು ನಮ್ಮಜ್ಜಿ.

ಬೇಗೆಯ ಬವಣೆಗೆ ಜಡವಾಯ್ತು ಸೃಷ್ಟಿಯು
ಕೂಗಿಲ್ಲ—ಸದ್ದಿಲ್ಲ—ಬಿಡುವು.
ಬೀಗಲು ಭಯ, ಜೀವ ನೆಳಲಿಗೆ ಶರಣಾಯ್ತು—
ನಾಗಿಗನಾಥೆಗೆ ಬಿಡುವೆ ?

"ವರುಷದ ಕೂಸೆದ್ದು ಅಳುತಿರಬಹುದೇನೊ ?
ನರಸೀಗೆ ಹಸಿವೇನೊ, ಭಯವೊ ?
ಸರಿಹಗಲಚ್ಚೀರು ಬೀಸುವುದುಳಿದಿದೆ,
ಇರುಳೀಗೆ ತುಸ ಹಿಟ್ಟೊ ಇಲ್ಲ."

ಸೊರ ಸೋರ ಬುಸುಬೂಸು ಎಂಬೊಂದು ದನಿಯಿಂದು
ಗರಿಮೂಡಿದಜ್ಜಿಯ ಕನಸ
ಹರಿಯೆ, ತಾನೆಲ್ಲೆಡೆ ನಿರುಕಿಸಿ ಕಂಡಳು
ಸೊರಗುವ ಒಕ್ಕಲ ಹೆಣ್ಣ.

## ಹಣತೆ

''ನಾಗಿ, ಇದೇನವ್ವ ಬಿಸಿಲೊಳು ಕಣ್ಣೀರು !
ಸಾಗಿದ ಗಂಡನ ನೆನಪೆ ?
ಬೇಗುದಿಗೊಂಬೆಯು ಬದುಕಿನ ಬವಣೆಗೆ ?
ಮಾಗಿಲ್ಲವೇ ಬಾಳ ಗಾಯ ?

''ಬಿಕ್ಕಿ ನೀನಳುವಷ್ಟು ಕಷ್ಟ ಅದೇನವ್ವ ?
ಮಕ್ಕಳ ಹಂಬಲೆ, ನಾಗಿ ?''
ಉಕ್ಕುವ ದುಃಖವ ನುಂಗುತ ನುಡಿದಳಾ
ಒಕ್ಕಲಹೆಣ್ಣು ಈ ತೆರದಿ :

''ಏನೇಳ್ಳಿ ನಮ್ಮವ್ವ, ಇರುವೋರು ಮೂವೋರು :
ನಾನು ನಮ್ಮೆಣ್ಣು ಮೊಲೆಗೂಸು.
ಕಾಣಿರಾ, ಒಪ್ಪೊತ್ತು ದುಡಿಯದೆ ಕೂತರೂ
ಪ್ರಾಣಾವ ನೀಸೋದು ಕಷ್ಟ.

''ಹುಲುಮನುಸಿಯ ಪಾಡು ಹಿಂಗಯ್ತೆ, ನಮ್ಮವ್ವ,
ಮಲೆದೇವ್ರ ಪಾಡ ಏನೇಳ್ಳಿ !
ಸುಲುಭಾನೆ ಲೋಕಾದ ಸಂಸಾರ ನಡೆಸೋದು ?
ಅಳು ಬಂತು ನಮ್ಮಪ್ಪಗಾಗಿ.''

''ಹುಚ್ಚಿ ನೀನೆಲ್ಲಾರೂ ಹೋಗೆ''ಂದು ನಮ್ಮಜ್ಜಿ
ಹುಚ್ಚಾಗಿ ನಕ್ಕಳು ಅಂದು.
ಹೆಚ್ಚುಂಟೆ ಒಕ್ಕಲ ಹೆಣ್ಣಿನ ಮರುಕಕೂ ?
ಅಚ್ಚರಿಗೊಂಬೆ ನಾನಿಂದೂ ?

———

# ರಂಗವಲ್ಲಿ

ಮಾಗಿ ಬಂದು, ಗಿರಿಗೆ ಹಗಲು
ಹಿತದ ಬಿಸಿಲ ಹೊದಿಸಿದಂದು,
ಹಸುಳೆಗೂಡಿ ಬೆಟ್ಟತುದಿಯ
ಗುಡಿಗೆ ನಡೆದೆನು.
ಬಾಲ ಕೊಳಕೆ ಕಲ್ಲನೆಸೆದು
ಸುಳಿಯ ರಚಿಸಿ, ನಲಿವ ತೆರದಿ,
ಹಗಲ ಮೌನಕೆಸೆಯುತಿತ್ತು
ಹಾಡ ಹಕ್ಕಿಯು.

ಗಿರಿಯ ತುದಿಯ ಗುಡಿಯ ಸೇರಿ
ಹಸುಳೆಗೂಡಿ ನಿಂತೆನಂದು
ಮಂದಿಯೊಬ್ಬರಿಲ್ಲವಲ್ಲಿ—
ಮೌನವಾಳಿತು.
ಹೃದಯದಲ್ಲಿ ಭಕ್ತಿ ಮೂಡಿ
ಮನದೊಳುಚ್ಚಭಾವ ಹೂಡೆ,
ಗುಡಿಯನೊಂದು ಬಳಸು ಬಂದು
ಒಳಗೆ ಹೊಕ್ಕೆನು.

ಅಲ್ಲಿ ವೇದಘೋಷವಿಲ್ಲ,
ತಮಿಳು ಪದ್ಯವೊರೆವರಿಲ್ಲ,
‘ ಮಾನ ಸಲಿಸಲಿಲ್ಲ ’ವೆಂಬ
ಜಗಳವಿಲ್ಲವು.

## ಹಣತೆ

ಇರವಿನಳಲನೆಲ್ಲ ಮರೆಸಿ
ಮನಕದೊಂದು ತಂಪನೀವ
ದಿವ್ಯಶಾಂತಿಯಂದು ಕಂಡೆ
ಗಿರಿಯ ಗುಡಿಯೊಳು.

ಗರ್ಭಗುಡಿಯ ಹೊಸಿಲ ಮುಂದೆ
ಭಕ್ತಿನಮ್ರನಾಗಿ ನಿಂತೆ ;
ಹಸುಳೆ ನನ್ನ ಸೆರಗ ಜಗ್ಗಿ
ಬೆರಲ ತೋರಿತು—
ಅಲ್ಲಿ ಮಸಕು ಬೆಳಕಿನೊಳಗೆ
ಬಾಗಿದೊಂದು ವ್ಯಕ್ತಿ ಕಂಡೆ :
ಹಣ್ಣುಹಣ್ಣು ಮುದುಕಿಯಲ್ಲಿ !
ಬೆಟ್ಟತುದಿಯೊಳು !

ಮುದುಕಿಯುಟ್ಟ ಬಟ್ಟೆ ಚಿಂದಿ,
ನರೆತ ಹೆರಳು, ಸುಕ್ಕುಮೋರೆ,
ಮುಪ್ಪು ತನ್ನ ಮುದ್ರೆಯೊತ್ತಿ-
ದಂಗವವಳದು ;
ಆದರವಳ ಕಂಗಳೆರಡು
ಜರೆಯನಣಕಿಸುತ್ತ ಹೊಳೆದು
ಮುಖಕೆ ಕೊಡುತಲಿದ್ದುವೊಂದು
ಬಗೆಯ ಠೀವಿಯ.

## ಹಣತೆ

ಬೆಟ್ಟ ಹತ್ತಿ ಬಂದಳೆಂತು ?
ಚೆಂದಿಯುಟ್ಟ ತೀರ ಬಡವೆ
ಮಲೆಯ ನಾರಸಿಂಹಗೀವ-
ಳಾವ ಕಾಣಿಕೆ ?
"ಎಲ್ಲರೆದೆಯ ಹೊಗುವ ದೇವ
ಹೊನ್ನು ಹಣ್ಣೊಳಿಳಿಯನೊಲವ"
ಎನ್ನುವರಿವು ಆಕೆಗಿತ್ತೊ ?—
ಎನಗೆ ತಿಳಿಯದು.

ಸೆರಗಿನಿಂದ ನೆಲವ ಗುಡಿಸಿ
ಮಡಿಲೊಳಿಟ್ಟು ಮುಚ್ಚಿ ತಂದ
ರಂಗವಲ್ಲಿಯಿಂದ ಹಸೆಯ
ಮುದುಕಿ ಬರೆದಳು—
ಮೊದಲು ನೂರು ದಳದ ಪದ್ಮ,
ಅದರ ಸುತ್ತ ಬಳ್ಳಿಹೆಣಿಗೆ,
ಬಳ್ಳಿಯೆಲೆಯ ಮೇಲೆ ಪಕ್ಷಿ-
ಯುಗದ ಬೇಟವು.

ಇಂತು ತನ್ನ ಮನಕೆ ಚೆಲುವು
ಹೊಳೆಯುವಂತೆ ರೂಪುಗೊಡುತ
ಹಸೆಯ ಬರೆಯುತಿರವ ಮರೆತ-
ಳಂದು ಮುದುಕಿಯು.

ಅವಳ ಕಲೆಗೆ ಮುಗ್ಧನಾದೆ;
ಒಂದು ಡೊಂಕು ಗೆರೆಯನೆಳೆಯು-
ದವಳ ಕೈಯು ಚಳಕವೆನ್ನ
ಬೆರಗುಮಾಡಿತು!

ಹಣ್ಣು ಮುದುಕಿ ತೀರ ಬಡವೆ,
'ಅಯ್ಯೊ' ಎಂಬರಿಲ್ಲವೇನೊ
ಮಲೆಯ ನಾರಸಿಂಹದೇವ-
ನೊಬ್ಬನಲ್ಲದೆ?
ಅವನು ಮೆಚ್ಚಲೆಂದು ತನ್ನ
ಮುಪ್ಪಿನಳಲ ಮೂಲೆಗೊತ್ತಿ
ಬೆಟ್ಟವೇರಿ ಹಸೆಯು ಬರೆವ
ಭಕ್ತಿ ಎಂಥದು!

ತೆರೆಯು ತೆಗೆಸಿ, ಹಣ್ಣುಕಾಯು
ಪೂಜೆ ಸಲಿಸಿ, ಸೊಡರು ಬೆಳಗ-
ಲವನ ಕಂಡೆ—ಹಸುಳೆ ಇತ್ತ
ಕಡೆಯೆ ತಿರುಗದು!
ಮುದುಕಿ ಬರೆವ ಹಸೆಯ ಮೇಲೆ
ಅದರ ಮನವು, ನೆಟ್ಟ ನೋಟ,
ದೇವಗೊಲಿದು ಕೈಯು ಮುಗಿಯು-
ವರಿವೆ ಇಲ್ಲವು!

"ಕಿಟ್ಟು, ನೋಡು, ತಲೆಯಮೇಲೆ
ಹೊಳೆವ ಹೊನ್ನು ರನ್ನದೊಡವೆ,
ದೇವರುಟ್ಟ ಸರಿಗೆಪಂಚೆ,
ಕೊರಲ ಪದಕವ ;
ಮಲೆಯ ದೇವರೆಷ್ಟು ಚೆಲುವು ! "
ಹಸುಳೆ ನೋಡದಿತ್ತು ! ಅದಕೆ
ದೇವನಲ್ಲ—ಮುಗುಕಿ ಬರೆವ
ಹಸೆಯೆ—ಸೋಜಿಗ !

ಅದರ ನಡತೆ ಹೊಳೆಸಿತಂದು
ಮನಕದೊಂದು ಹೊಸದು ನಿಜವ :
ದೇವನಲ್ಲ—ಬರಿಯ ಬೊಂಬೆ !—
ಹಸೆಯೆ ಸೋಜಿಗ !
ಭಕ್ತಿಮೂರ್ತಿ ಮುದುಕಿಯೊಮ್ಮೆ,
ದೇವನೊಮ್ಮೆ ನೋಡುತೆಂದೆ :
ದೇವ ಬೊಂಬೆ, ಪೂಜೆ ಆಟ,
ಭಕ್ತಿ ಸೋಜಿಗ.

ದೇವನಿರವು ದಿಟವೊ, ಸಟೆಯೊ—
"ಹೆರರು ತಿಳಿಯದಿರಿತಗಳನು,
ಹದುಗಿ ಇರುವ ಪಾಪಗಳನು,
ಗುಟ್ಟನೆಲ್ಲವ,

ಎದೆಯು ಹೊಗುತಲೆಲ್ಲ ತಿಳಿದು
ಸಂತವಿಡುವನೊಬ್ಬನುಂಟು''
ಎನ್ನುವಚಲಭಕ್ತಿ ದಿಟವು,
ಮತ್ತು ಸೋಜಿಗ !

ಮುದುಕಿ ಇಹವ ಬಿಟ್ಟಳೇನೊ ?
ಮಲೆಯ ದೇವ ಮೆಚ್ಚಲೆಂದು
ಇನ್ನು ಹಸೆಯ ಬರೆಯಳೇನೊ
ಗಿರಿಯ ಗುಡಿಯೊಳು ?
ಆದರವನನೊಲಿಸುವುದನೆ
ಬಾಳಿನೊಂದೆ ಗುರಿಯ ಮಾಡಿ-
ದವಳ ನೆನಪು ಎಂದು ಮನಕೆ
ತಂಪನೀವುದು.

———

# ‘ ಭೀಷಾಸ್ಮಾದ್ವಾತಃ ಪವತೇ ’

ಗಾಳಿಮುಂಚುವ ಗತಿಯೊಳೋಡುತಿರೆ ರಥವು,
ಸಂಶಯಗಳುಯ್ಯಲೊಳಗೋಲಾಡೆ ತಿಳಿವು ;
“ ಶೂನ್ಯವಾದವೆ ಸತ್ಯ, ಸಟೆ ಬ್ರಹ್ಮದಿರವು ”
ಎಂಬ ನಿಜಕೊಯ್ಯುತಿರೆ ಗತಿ ಕಾಣದರಿವು ;
ರಥದ ವೇಗವು ಕುಗ್ಗಲೆಚ್ಚತ್ತೆನಂದು,
ಬಲುಬೆದರಿ ಕಂಡೆ ನಾ ಸೋಜಿಗವನೊಂದು ;

ನಾನರಿಯೆನಾದರೂ ನನ್ನ ಬಾಯೊಳಗೆ
ರಸನೆ ಚಲಿಸುತಲಿತ್ತು ನೂರು ತೆರದೊಳಗೆ !
ಚಲನಕಾರಾಣತಿಯನಿತ್ತರೆನ್ನುತ್ತ
ಸೋಜಿಗವ ಪಡುತಿಹುದು ಮಿಡುಕುತ್ತ ಚಿತ್ತ !
ಆಣತಿಯನೀಯದೆಯೆ ರಸನೆ ಚಲಿಸುವುದೆ ?
ಎನ್ನ ಇಚ್ಛೆಯು ಎನ್ನ ತಿಳಿವಿಗೊಳಪಡದೆ ?
ಎನ್ನೊಳಗೆ ಎನ್ನರಿವ ಮೀರಿರುವ ಶಕ್ತಿ
ಅಂಗಗಳ ನಡೆಸುತಿರೆ, ಯೋಗಿಗಳ ಉಕ್ತಿ
ಸಟೆಯಹುದೆ ?—“ಅವನಿಚ್ಛೆ ನುಡಿಸುತಿದೆ ಜಗವ”,
“ಅರಿವಿಗದು ಸಿಲುಕದೈ, ಹಳಿವುದೈ ಮನವ”;
“ಬೆದರುತವನಾಣತಿಗೆ ಗಾಳಿ ಬೀಸುವನು,
“ಬೆದರುತ್ತ ಮೂಡುವನು ಬಾನಿನೊಳು ಭಾನು,
“ಬೆದರುವರು ಇಂದ್ರಾಗ್ನಿ, ಓಡುವುದು ಸಾವು”;
“ಅವನು ಇಚ್ಛಿಸದಿರಲು ಚಲಿಸದೈ ತೃಣವು.”
ಎಂದು ಹಾಡಿದ ಋಷಿಯ ಮೃದುಮಧುರ ಗಾನ
ತುಂಬಿತ್ತೈ ಹೃದಯದೊಳು, ಮೂಡೆ ಸುಮ್ಮಾನ.

# ಅಭಿಸಾರಿಕೆ

ಹಿಮಕರ ಮೈದೋರಿ
ಮೋಡದ ಮರೆ ಸೇರಿ
ಇರೆ ಸಂಕೇತದೊಳು
ಪ್ರಣಯ ನಿರೀಕ್ಷೆಯೊಳು
ಗುಂಪನು ತೊರೆದಂದು
ತುಡಿಯುತ ಉಡುವೊಂದು
ಸರಿದುದು ಬಾನಿನೊಳು
ನಿರ್ಜನ ಮಾರ್ಗದೊಳು.

ಎಲ್ಲೆಡೆ ಬರಿ ಕಾಡು,
ನೀರವತೆಯ ಬೀಡು ;
ತಾರಗೆ ತಾನೊಂಟಿ,
ಕಾಮುಕಳುತ್ಕಂಠಿ
ಮಿಣ ಮಿಣ ಮಿಣಗುಟ್ಟಿ
ಭಯ ಲಜ್ಜೆಯ ಮೆಟ್ಟಿ
ಅಭಿಸಾರಿಕೆ ಸರಿವ
ನೋಡೀ ಸೋಜಿಗವ !

ಗಿರಿಗಳ ತುದಿಯೇರಿ
ಕಂದರದೊಳು ಧುಮುಕಿ
ಗುಲ್ಮದ ನಡುತೂರಿ
ಮರಳ್ಗಾಡೊಳು ಮಿಡುಕಿ

ಸರಸಿಯ ಮೇಲ್ವಾಯ್ದು
ಹೊಳೆ ತೊರೆಗಳ ಹಾಯ್ದು
ಅಭಿಸಾರಿಕೆ ಸರಿವ
ನೋಡೀ ಸೋಜಿಗವ !

ಶಶಿ ಇರುವೆಡೆ ಇನ್ನೂ
ನೋಟಕು ಬಲು ದೂರ
ತಾರಗೆಗಿಹುದಿನ್ನೂ
ನಡೆ ಯೋಜನ ದೂರ ;
ಆದೊಡೆ ಎದೆಗುಂದಿ
ಈ ಕಾಮನ ಬಂದಿ
ಅಂಜದೆ ಮುಂಬರಿವ
ನೋಡೀ ಸೋಜಿಗವ !

ಮಿಣಿ ಮಿಣಿ ನಿರಿ ಚಿಮ್ಮಿ
ಪ್ರಣಯದಿ ತುಡಿ ತುಡಿದು
ಮಾರನ ಮರೆ ನೆಮ್ಮಿ
ನಿರ್ಜನ ಪಥವಿಡಿದು
ಚೆಲುವಿನ ಹೊಳೆ ಹರಿಸಿ
ಭಾವದ ಅಣೆಯೊಡೆಸಿ
ಅಭಿಸಾರಿಕೆ ಸರಿವ
ನೋಡೀ ಸೋಜಿಗವ !

# ಗಾನ

ಆಲಿಸೀ ಗಾನವನು, ಶ್ರೋತ್ರಸಂಮೋದವನು,
ಇರವುಗೊಂಡರಿವಳಿದು ಕನಸಿನೊಳು ಕಣ್ತೆರೆವ
ಸ್ವರದ ಚೆಲ್ಲಾಟವನು, ಇಸಿದಸಿಯ ಮೇಳವನು—
ಪೇಳುವೆಯು, ಭಾವಿಪೆಯು ಅದು ನುಡಿವ ಗುಟ್ಟನ್ನು ?

ತಾರೆ ಸಿಡಿದಿಳೆ ಮೂಡಿ ಜೀವವೊಗೆದಚ್ಚರಿಯು,
ಸೋವಿನೊಳು ಮು:ಮ್ಮೊಳಿತು ಜಗವ ಚೋದಿಪ ನಲ:
ಸಾವಿನೊಗಟೆಯು, ಸೃಷ್ಟಿ ವಿಧ ವಿಧದಿ ವಿಕಸಿಸುವ
ಕಾರಣದ ನಲ್ಗತೆಯು ಭಾವದಿಂದುಸಿರುವುದೆ ?

ಕಾಲವನು ಹಿಂತಳ್ಳಿ ನೆನಪ ನೆಳಲೆಬ್ಬಿಸುತ,
ಗಂಧ ರೂಪ ಸ್ಪರ್ಶ ತೃಷ್ಣೆಗಳ ಕೆರಳಿಸುತ,
ಬಂಧನದ ಸವಿಯುಳಲ, ಬಾಳ್ವೆಯುಂತದ, ಗುಟ್ಟ
ಪೇಳುತಿಹುದೇ ನೇತಿ ನೇತಿ ಎಂದೀ ನಾದ ?

ಗಾನವಾವುದೊ ಗೂಢಭಾವವನು ಬಿಚ್ಚುತಿಹುದು—
ಆತ್ಮವದನರಿತಿಹುದು ; ನುಡಿಗೊಡಲು ನೋಯುತಿಹುದು:

———

# ಯದುಗಿರಿಯ ಮೌನ ವಿಕಾಸ

೧

[ಯದುಗಿರಿಯ ಮೂಡಣ ಕಣಿವೆಯ ಮೌನ]

ಮೂಡಣ ಕಣಿವೆಯ ಹಿಮದವಕುಂಠನ
ರವಿಕರ ಸ್ಪರ್ಶಕೆ ಜಾರುತಿದೆ,
ನಾಡದೊ ಹಿಗ್ಗುತ ನಾಚುತ ಮೆಲ್ಲನೆ
ಮೈಸಿರಿಯನು ತಾ ತೋರುತಿದೆ.

ಬನದೊಳು ಕೆರೆಯೊಳು ಕಮರಿಯ ಬುಡದೊಳು
ದಿಗಂತ ವಿಸ್ತೃತ ನಾಡಿನೊಳು,
ಇನನರುಣಾಂಶುಗಳೆಲ್ಲೆಡೆ ಮಿಡಿವುವು
ತರುಜಲಗಳ ನೆರೆ ನಲವಿನೊಲು.

ಜನಪದದಂತರ್ಯಾಮಿಯ ಯೋಗ ಸ-
ಮಾಧಿಯು ಕಲಕಿದೆ ಸುಮ್ಮಾನ;
ಕಣಿವೆಯ ತಳದಂಚಿನೊಳೊಯ್ಯೊಯ್ಯನೆ
ಎಚ್ಚರುತಿದೆ ಮಾಗಿಯ ಮೌನ.

ಕರುಗಳ ಗಂಟೆಯ ಕಿಣಿ ಕಿಣಿ ರವದೊಳು,
ನಿರ್ಝರ ಮರ್ಮರ ನಾದದೊಳು,
ಖಗದಿಂಚರದೊಳು, ಮೃಗ ಕೂಜನದೊಳು,
ಡೇಗೆಯ ರೆಕ್ಕೆಯ ಹೊಯ್ಲಿನೊಳು;

ಮಂದಾನಿಲನೊಲಿದಲೆಯುವ ಮಾರ್ಗದಿ,
ರೈತರ ಮಂಜುಳ ವಾಣಿಯೊಳು,
ದಧಿಭಾಂಡವ ಹೊತ್ತೊಯ್ಯನೆ ಸಾರುವ
ಗೊಲ್ಲತಿಯರ ನಡೆ ಮಾತಿನೊಳು ;

ಮೂಡಣ ಕಣಿವೆಯ ತಳದೊಳಗಾಲಿಸು
ಎಚ್ಚತ್ತಿದೆ ಮೌನ !
ಸಾಸಿರ ದನಿಯೊಳು ಚಿಗುರಿದೆ ಮೌನ,
ಸುಮ್ಮಾನದಿ ನುಡಿವೆತ್ತಿದೆ ಮೌನ,
ಸುಂದರವೀ ಮೌನ !
ಸವಿ ಮೌನ !

೨

[ಯಮುಗಿರಿಯ ಪಡುವಣ ಕಣಿವೆಯ ಮೌನ]

ಪಡುವಣ ಕಣಿವೆಯ ಸೀರವ ಭಾವವ
ಹಗಲಿನ ಹರುಷವು ಕೆಣಕಿಲ್ಲ.
ಕಣಿವೆಯನಾಳುವ ಕರಿಕಲ್ ಗುಡ್ಡದ
ಸಿರ್ಭರ ಮೌನವು ಕದಡಿಲ್ಲ.

ಅಲ್ಲಲ್ಲೊಮ್ಮೊಗೆ ಒಮ್ಮೊಗೆ ಇಂಚರ
ನುಸುಳುವುದಾಳದ ಅಂಚಿನೊಳು,
ಸಾನ್ನಿಧ್ಯದ ಗಾಂಭೀರ್ಯವನರಿಯದ
ಹಸುಳೆಯ ಧಾರ್ಷ್ಟ್ಯದ ಮಾತಿನೊಲು.

ರಾಜರ್ಷಿಗೆ ರವಿ ತಹ ಕಾಣಿಕೆಯೊಲು
 ಕಣಿವೆಯು ತುಂಬಿದೆ ಹೂಬಿಸಿಲು ;
ಗಿರಿಯೆಡೆ ನೀರವ ತರುಗಳು ನಿಂದಿವೆ
 ವಿನೀತಭಾವದಿ ಭಕ್ತರೊಲು.

ಬಸಿರೊಳು ವಿಲಯವ ಹುದುಗಿಸಿ ನಿಂತಿರು-
 ವಂತಿದೆ ಗಿರಿ ದಮದೋಜೆಯೊಳು ;
ಬೆಚ್ಚನೆ ಬಿಸಿಲಿನ ಪುಷ್ಪಸ್ಪರ್ಶಕು
 ಪ್ರಚಲಿತವಾಗದ ಯೋಗದೊಳು.

ಗಿರಿರಾಜನ ಸಾನ್ನಿಧ್ಯದ ನಾಡೊಳು
 ಹಗಲಿನೊಳೂ ಸದ್ದಿನಿತಿಲ್ಲ.
ಶಬ್ದದ ಶಮವಿದೆ, ಚಲನದ ದಮವಿದೆ,
 ಸುಷ್ಮಾನದ ಹುಚ್ಚಿನಿತಿಲ್ಲ.

ಪಡುವಣ ಕಣಿವೆಯು ಆಳದೊಳಾಲಿಸು
 ನಿದ್ರಿಸುತಿದೆ ಮೌನ!
ಹೊಂಬಿಸಿಲೆಚ್ಚರಗೊಳಿಸದ ಮೌನ.
ರಾಗ ಮೋದಗಳು ಕಲಕದ ಮೌನ,
 ಸೋಜಿಗವೀ ಮೌನ!
 ಘನ ಮೌನ!

## ೩

[ಯದುಗಿರಿಯ ದೇಗುಲದ ಮುಂಜಾನೆಯ ಮೌನ]

ಹಿಮ ಬೀಳುತಿದೆ, ಚಳಿ ಮೂಡುತಿದೆ,
ಮಾಗಿಯು ಗಾದಿಯನೇರುತಿದೆ ;
ತಮ ಹದುಗುತಿದೆ, ಬೆಳಕೊಗೆಯುತಿದೆ,
ಬೆಳ್ಳಿಯು ಮಂಜೊಳು ಕರಗುತಿದೆ.

ಜಾವದ ಪೂಜೆಯ ನಗಾರಿ ನಾದವು
ಎಚ್ಚರಿಸುತ್ತಿದೆ ಯದುಗಿರಿಯ—
ತ್ರಿಯಾಮೆಯುಂತ್ಯಾಲಿಂಗನ ಸುಪ್ತಿಯೊ-
ಳಿರವಳಿದಿರುವೀ ಯದುಗಿರಿಯ.

ಹರಿ ಸಾನ್ನಿಧ್ಯದಿ ಜನತೆಯು ನೆರೆದಿದೆ
ಝರಿಗಳು ಮಡುವೊಳು ನೆರೆವಂತೆ ;
ಗುಡಿಕತ್ತಲೆಯೊಳು ಹಣತೆಗಳೆಸೆದಿವೆ
ತಮವೇ ಪುಷ್ಪಿತವಾದಂತೆ.

ಮಾನುಷ ಪದರದಿ ಬಸಿಯುತ ಸ್ವೈಜಾ-
ನಂದಕೆ ತಿಳಿಯುವ ಯತ್ನದೊಳು
ಪಾಶುರ ಗಾನದಿ ನುತಿಕೊಡುತಿದೆ ಜೀ-
ವಾತ್ಮವು ದೇವನ ಸನಿಯದೊಳು.

ಸಹಸ್ರಕಂಠದಿ ಮೊಳಗಿಸಿದೆ ನುತಿ,
ದೇಗುಲವಾಗಿದೆ ಘೋಷವತಿ,
ಆತ್ಮಾನಂದಕೆ ತನ್ನೇಕಾಂತದಿ
ನಿಯತಿಯು ಮಿಡಿಯುವ 'ಘೋಷವತಿ'.

ಏನಿದು ಥಟ್ಟನೆ ಗೀತವು ಬಿಗಿದಿದೆ!
ದನಿಯುಡುಗಿಸಿ ನಿಂತಿದೆ ಜನತೆ!
ಏನೀ ಮೂಕತೆ, ಏನೀ ಮೌನತೆ,
ಏನೀ ಮಂದಿಯ ನೀರವತೆ!

ಜೀವವು ಭಾವಕೆ ಸಂದಿತೆ? ಗೀತವು
ಕೃತ ಕೃತಿಯಾಯಿತೆ? ಸದ್ದಿಲ್ಲ—
ಕಾಯದ ಕರಣದ ಹಂಗನು ತೊರೆಯಿತೆ
ಆತುಮ? ಭಾವವು ಸವಿಸೊಲ್ಲ?

ನುತಿ ಕೊಟ್ಟಾಯಿತೆ? ಮೊರೆಯಿಟ್ಟಾಯಿತೆ?
ಹಸಾದ ದೊರಕಿತೆ ಚೇತನಕೆ?
ನೋವನು ಸಾವನು ದಾಟಿದ್ದಾಯಿತೆ?
ಆ ದಡ ಸಿಕ್ಕಿತೆ ಆತುಮಕೆ?

ಹಿಂದಿನ ಚಣದೊಳು ಕಡಲೊಳು ಮೊರೆದೀ
ಮಂದಿಯ ಬಿಗಿದಿದೆ ನೀರವತೆ!
ದ್ವಂದ್ವವು ನಂದಿದೆ, ಜಾಡ್ಯವು ಹರಿದಿದೆ,
ಹುಟ್ಟಿದೆ ಸಾತ್ವಿಕ ಸುಸ್ಥಿರತೆ!

ದೇಗುಲದೊಳು ಮುಂಜಾನೆಯೊಳಾಲಿಸು
ಚಿತ್ ಆಗಿದೆ ಮೌನ !
ಭಾವವ ಕಾಯುವನಾಂತಿಹ ಮೌನ !
ಮೋಕ್ಷಾನಂದದಿ ಜೀವನ್ಮೌನ !
ಓ—ಕಡು ಸೋಜಿಗವೀ ಮೌನ !
ಚಿನ್ಮೌನ !

# ಬುದ್ಧ

ನೀನಂದು ಚಿನ್ಮೂರ್ತಿ ಭಾವಸುಪ್ತಿಗೆ ಸಂದು
ಲೀಲೆಯಿಂ ಬಗೆಗೊಂಡೆ ಜಗದ ಜೀವದ ಕನಸ;
ಕಾಲದೇಶವ್ಯಾಪ್ತಿ ಕನಸಿನೊಳು ನಿನಗಾಯ್ತು—
ಆನಂದವೆರಡಾಯ್ತು, ಚಿತ್ತು ಚಿದಚಿತ್ತಾಯ್ತು;

ಒಂದಿರವು ಬಹುವಾಗಿ ಜನ್ಮಮೃತ್ಯುಗಳೆಂಬ
ಹುಸಿಯಾಟ ಮೊದಲಾಯ್ತು; ಸಂಸಾರಿ ನೀನಾದೆ,
ಹಸಿವಾಂತೆ, ತೃಷೆಯಾಂತೆ, ನೇಹ ಮೋಹಗಳಾಂತೆ;
ಬಂಧನವೆ ಸವಿಯೆಂದೆ, ಕನಸನೇ ನನಸೆಂದೆ.

ಹೀಗೆ ಭವಮಾಯೆಯೊಳು ಭೋಕ್ತೃವಾಗಲು ನೀನು
ನೋವಂಟಿ, ಕಾವೇರೆ, ಧರ್ಮಭಯ ಕರ್ಮಭಯ
ಸಾವಿನತ್ಯುಗ್ರಭಯ, ಚೇತನವ ತಲ್ಲಣಿಸ-
ಲಾಗ 'ದಿಟಮೋ?' ಎಂದು ಶಂಕೆಗೊಂಡೆಚ್ಚತ್ತೆ.

ಎಚ್ಚರಲು, ಹೇ ಬುದ್ಧ, ಹಿಂಗಿತಾ ಭವಕ್ರಾಂತಿ:
ನೋವಿಲ್ಲ, ಸಾವಿಲ್ಲ, ಏಸಿಲ್ಲ: ಶೂನ್ಯ—ಶಾಂತಿ.

———

# ತಲಕಾವೇರಿಗೆ ಹತ್ತು ಮಾರುಗಳ ಹಿಂದೆ

ಏನು ? ಇದೆ ಆ ತಾಣ ? ಬ್ರಹ್ಮಗಿರಿಯುದರದೊಳು
ಕಾವೇರಿ ಜನ್ಮಿಸುವ ಪರಮ ಯಾತ್ರಾಸ್ಥಾನ ?
ಬೇವಸವ ಕಳೆವಿಲ್ಲಿ, ತುಸ ಸಿಲ್ಲು, ಶಿವರಾಮು—
ಏನು ಸುಂದರ ಭೂಮಿ, ಸೂರೆಗೊಂಡಿದೆ ಚೆಲುವು !

ಆವುದೋ ಸಂತಸವು ಮೂಡುತಿದೆ ಮನದಲ್ಲಿ,
ಆವ ಸಂದೇಶವನೊ ಒಯ್ಯುತಿದೆ ಬನಗಾಳಿ,
ಆವುದೋ ಮಂತ್ರದೊಳು ಕುಳಿತಿಹರು ಗಿರಿವೃದ್ಧ-
ರಾವ ಕಜ್ಜಕೊ ಬನಗಳುತ್ಸವದಿ ಹೊರಹೊರಟು

ಮೋಡಿಳಿದು ಕಣಿವೆಯೊಳು ಗುಜಿ ಗುಜಿಸುತೋಡುತಿವೆ.
ಬೀಳುಗೈದೀ ಚೆಲುವ ಕಟ್ಟಡವಿ ಮಧ್ಯದೊಳ-
ಗೇಳುತಿರುವೀ ಧೂಮ ! ನರಸಿರವ ಮೆರೆದ ಗುಡಿ !
ನೋಡು, ಚಿತ್ತಿನ ದಿವ್ಯದಿವಸೀಲ ಸುಪತಾಕೆ !

ಏನೆಂಬೆ—''ರಮ್ಯಮಯಿ ಪುಣ್ಯಮಯಿಯಾಯಿತೆ''ಂದು ?
ಮನುಜನಿಂದೀ ತಾಣ ಪುಣ್ಯಮಯಿಯಾಯಿತಿಂದು.

——

# ಯದುಗಿರಿಯ ಇರುಳು

ರವಿದೃಷ್ಟಿಮಂತ್ರದಿಂ ಬಿಡುಗಡೆಯನಾಂತೀಗ
ನೈಜ ಸತ್ವಕೆ ತಿಳಿದು ತಿರೆ ಬಿಡುವುಗೊಂಡಿಹಳು.
ಸಾಜವಾಗಿದೆ ವಿಶ್ವದಿರವಿಂಗೆ ಈ ಇರುಳು.
ಭುವನಜೀವವು ರಂಗ ವೇಷ ಕಾರ್ಯಗಳುಳಿದು

ತನ್ನ ಬಾಳಿಗೆ ಬಂದ ನಟಿಯಂತೆ ತೋರುತಿದೆ.
ವಿಶ್ವಾತ್ಮನೆಚ್ಚತ್ತು ಚುಕ್ಕಿಕಣ್ ತೆರದಿಹನು,
ನಿಶ್ವಾಸದೊಲು ಗಾಳಿ ಚಣಕೊಮ್ಮೆ ಬೀಸುತಿದೆ.
ಚಿನ್ಮಯನ ಬಗೆಯುಡಿಯೊಳೊತ್ತುತಿಹ ಕನಸಂತೆ—

ನನಸಿನೊಳಗವನೆಸೆವ ಕನಸುಗಳ ನೆಳಲಂತೆ—
ಕಾಣುತಿವೆ ತರುಲೇಖೆ, ಗಿರಿಯ ಸೀಮಾಲೇಖೆ,
ಮೌನವಾಳುವ ಹೊಳಲು, ಗುಡಿ, ಗುಡಿಲು, ಕರುನಾಡ.
ಕನಸೆ ಇದು ? ಇದು ನನಸೆ ? ಸೋಜಿಗವಿದೇನೆಂದು

ವಿಶ್ವಕವಿಮನದಲ್ಲಿ ಮೂಡಿರುವ ಮರ್ಮದಂತೆ
ಸಪ್ತರ್ಷಿಮಂಡಲವು ಭ್ರಮಿಸುತಿದೆ—ಪ್ರಶ್ನದಂತೆ.

—

# ಅಕಾರಾದಿ ವಿಷಯಾನುಕ್ರಮಣಿಕೆ

## ಕವನಗಳು


| | ಪುಟಗಳು |
|---|---|
| ಅಭಿಸಾರಿಕೆ | ೯೫ |
| ಆನಂದನ 'ಗೆಜ್ಜಸ್ರ' | ೩೨ |
| ಇಂದೇನು ಬಾಸಿನೊಳಗತುಲಲಾವಣ್ಯ | ೨೩ |
| ಎರಡು ಹಕ್ಕಿ | ೫೩ |
| ಏತಕೆ ? | ೭೧ |
| ಒಲುಮೆಯ ಬಳುವಳಿ | ೪೦ |
| ಒಲುಮೆವೆಣ್ಣು | ೪೨ |
| ಒಲುಮೆಹೊನಲ ತಡೆಗಳು | ೭೬ |
| ಕಡುಸವಿಯಿಂಚರ ಕೊರೆಯಿತು ನನ್ನೆದೆಯ | ೫೫ |
| ಕಣಿವೆಯ ಮುದುಕ | ೬೩ |
| —ಕಮಲೆ | ೬೬ |
| ಕೊಳದ ತಡಿಯಲ್ಲಿ | ೪೫ |
| ಕಂಬನಿ | ೬೦ |
| ಗಾನವೆನ್ನೀ ಭುವಿಯನಾವರಿಪುದಾಗ | ೧೯ |
| ಗಾನ | ೯೭ |
| —ಗೆ | ೪೧ |
| ತಲಕಾವೇರಿಗೆ ಹತ್ತು ಮೂರುಗಳ ಹಿಂದೆ | ೧೦೫ |
| ನನ್ನ ಹಾಡು | ೧೭ |
| ಪತಿತಪಾವನ | ೮೦ |
| ಬಯಕೆ–ಕೊಡಿಗೆ | ೩೬ |
| ಬಾನ್ ತಿಳಿದಿತ್ತು | ೨೫ |

| | ಪುಟಗಳು |
|---|---|
| ' ಭೀಷಾಸ್ಮಾದ್ವಾತಃ ಪವತೇ ' . . | ೯೪ |
| ಬುದ್ಧ . . . . . . | ೧೦೪ |
| ಮಳೆಯು ನಾಡ ತೊಯ್ಯುತಿರೆ . . | ೫೭ |
| ಯದುಗಿರಿ . . . . . . | ೨೭ |
| ಯದುಗಿರಿಯ ಇರುಳು . . . . | ೧೦೬ |
| ಯದುಗಿರಿಯ ಮೌನ ವಿಕಾಸ . . . . | ೯೮ |
| ಯುಗಾದಿಯ ಹಾಡು . . . . | ೫೦ |
| ರಂಗವಲ್ಲಿ . . . . . . | ೮೮ |
| ವಿಶ್ವಕುಟುಂಬಿಯ ಕಷ್ಟ . . . . | ೮೬ |
| ಶರದ ಮತ್ತು ಶರಚ್ಚಂದ್ರ . . . . | ೨೦ |
| ಹುಚ್ಚಿ . . . . . . | ೭೫ |
| ಹೆಣ್ಣೊಬ್ಬಳ ಕಣಸು . . . . | ೩೪ |
| ಹೂಗಳೇತಕೆ . . . . . . | ೨೯ |

---

# ಅಕಾರಾದಿ ವಿಷಯಾನುಕ್ರಮಣಿಕೆ

## ಮೊದಲ ಚರಣಗಳು


| | | |
|---|---|---|
| | | ಪುಟಗಳು |
| ಆಲಿಸೀ ಗಾನವನು, ಶ್ರೋತೃ ಸಂಮೋದವನು | . . | ೯೭ |
| ಇಂದೇನು ಬಾನಿನೊಳಗತುಲಲಾವಣ್ಯ! . . | . . | ೨೩ |
| ಎದೆಯ ಹೊಸಿಲಿನೆಡೆಯೊಳಿಂತು . . | . . | ೪೨ |
| ಎನ್ನ ಬಾಳಿನೊಳಿತ್ತು ಚೆಲ್ವಿಕೆ . . | . . | ೪೦ |
| ಎನ್ನೆದೆ ಕತ್ತಲೆಗಂಜುತ ನಲ್ಲೆ . . | . . | ೪೧ |
| ಏನು ? ಇದೆ ಆ ತಾಣ ? ಬ್ರಹ್ಮಗಿರಿಯುದರದೊಳು | . . | ೧೦೫ |
| ಏಳಿ ರವಿಯು ಮೂಡುವೊಳಗೆ . . | . . | ೫೦ |
| ಒಲುಮೆಹೊನಲಿಗಣೆಗಳೆಷ್ಟು . . | . . | ೭೬ |
| ಗಾಳಿಮುಂಚುವ ಗತಿಯೊಳೋಡುತಿರೆ ರಥವು | . . | ೯೪ |
| ಗೂಡಿನೇಕಾಂತದೊಳು ಯೋಚಿಸಿತು ಹಕ್ಕಿ | . . | ೫೩ |
| ಚಪಲೆ ಬಯಕೆ ಕೊಡಿಗೆಗೊಂದು . . | . . | ೩೬ |
| ಚಿಮ್ಮುಗಿಲ ತೋರಣವು ಬಾನಿನೊಳಗೇರೆ | . . | ೧೯ |
| ಚೆಲುವ ನೋಡಿ ಮುಕುರದೊಳಗೆ . . | . . | ೬೬ |
| ಚೈತ್ರಮಾಸದೊಂದು ರಾತ್ರಿ . . | . . | ೬೦ |
| ದೊರೆಯ ನೋಡಲು ನೆರೆದ ಮಂದಿಯ | . . | ೩೪ |
| ನಮ್ಮ ಕೊಳೆಯನೆಲ್ಲ ತೊಳೆದು . . | . . | ೮೦ |
| ನೀನಂದು ಚಿನ್ಮೂರ್ತಿ ಭಾವಸುಪ್ತಿಗೆ ಸಂದು | . . | ೧೦೪ |
| ನೋಡು, ಕೆಳೆಯ, ಮಾನಹೀನೆ . . | . . | ೭೫ |
| ಪಡುವ ಬಾನಿನ ಹಬ್ಬ ಮುಗಿಯಲು . . | . . | ೭೧ |
| ಪಡುವಣ ಕಡಲೊಳು ಹೊಂದೆರೆ ಹೊರಳುತ | . . | ೪೫ |
| ಪಯಣ ಬೆಳಸಿತು ಸಂಜೆ; ಬಾನು | . . | ೬೩ |

| | | |
|---|---|---|
| | | ಪುಟಗಳು |
| ಬಲಿತ ಬಿಸಿಲೊಳು | .. .. .. | ೨೯ |
| ಬಳ್ಳಿಯೊಡಲ ಕುಸುಮದಂತೆ | .. .. | ೧೭ |
| ಬಾನ್ ತಿಳಿದಿತ್ತು–ಬಿಳಿಮುಗಿಲೋಳಿಯು | .. | ೨೫ |
| ಬೇಸಗೆ ಮಧ್ಯಾಹ್ನ ತಾಪವುಮ್ಮಳಿಸಿತು | .. .. | ೮೬ |
| ಮಳೆಯು ನಾಡ ತೊಯ್ಯುತಿರೆ | .. .. | ೫೭ |
| ಮಾಗಿ ಬಂದು, ಗಿರಿಗೆ ಹಗಲು | .. .. | ೯೮ |
| ಮುಗಿಲಿನ ಬಾಗೆಯ ಹೂಗಳನೆರಚುತ | .. .. | ೫೫ |
| ಮೂಡಣ ಕಣಿವೆಯ ಹಿಮದವಕುಂಠನ | .. .. | ೯೮ |
| ರವಿದೃಷ್ಟಿಮಂತ್ರದಿಂ ಬಿಡುಗಡೆಯನಾಂತೀಗ | .. | ೧೦೬ |
| ರವಿ ಮುಳುಗಲು, ಹೊನ್ನೀಲಿಯ | .. .. | ೨೭ |
| ಶರದಳು ಋತುಗಳ | .. .. .. | ೨೦ |
| ಹೊನ್ನುಡೆಯ ತಿರೆಯುಡಲು, ಪಡುಗಡಲ ಮೇಲೆ | .. | ೩೨ |